# ಮಹಿಳಾ ವಿಶೇಷ

**MAHILA VISHESHA** RNI No. KARKAN/2015/71642

ಕನ್ನಡ ತಿಂಗಳ ಪತ್ರಿಕೆ KANNADA MONTHLY ಆಗಸ್ಟ್ August 1-31 -2018

Vol: 3 Issue : 12 **36** Pages : 16 Price: Rs.10/-

ಸಂಪುಟ: 3 ಸಂಚಿಕೆ: 12 ಪುಟ : 16 ಬೆಲೆ: ರೂ. 10/–

ಸಂಪಾದಕರು: ಹೆಚ್.ವಿ. ವೆಂಕಟಸುಬ್ಬರಾವ್ ಮೊಬೈಲ್ 8880334444/9243584444




ಒಳ ಪುಟಗಳಲ್ಲಿ....

ಪತ್ರಗಳ ಮಾಹಿತಿ– ಬೃಹತೀ(ಹೆಗ್ಗುಳ್ಳ) 2
ಶ್ರೀ ವರಮಹಾಲಕ್ಷ್ಮಿ ವ್ರತ 4
ತಿರು ಓಣಂ 6
ನಾಗಪಂಚಮಿ 7
ಆಧ್ಯಾತ್ಮ ಗಣಿತ ಚಮತ್ಕಾರ 8
ಜೀವಕ್ಕೆ ಆಯಸ್ಸು ತುಂಬುವುದಕ್ಕಿಂತ... 11
ಸ್ತ್ರೀ ಪುರುಷರಲ್ಲಿನ ಸ್ವಭಾವಜನ್ಯ ವ್ಯತ್ಯಾಸಗಳು 14
ರೀ... ಸ್ವಲ್ಪ ನಗೀ ಪ್ಲೀಸ್ 15




ಒಡಹುಟ್ಟ ಪಂಚಮಿ, ಸ್ವಾತಂತ್ರ್ಯ ದಿನಾಚರಣೆ, ಬಕ್ರೀದ್, ವರಮಹಾಲಕ್ಷ್ಮಿ ಹಬ್ಬ, ತಿರು ಓಣಂ, ಜನಿವಾರದ ಹಬ್ಬದ ಪ್ರಯುಕ್ತ ಎಲ್ಲಾ ಓದುಗರಿಗೂ ಶುಭಾಶಯಗಳು

## 21 ಪತ್ರೆಗಳ ಮಾಹಿತಿ



ಗಣೇಶ ಚತುರ್ಥಿಯ ಶುಭಾಶಯಗಳು. ಗಣೇಶನ ಪೂಜೆಯನ್ನು ಮಾಡುವಾಗ ಅರ್ಚನೆಯಲ್ಲಿ 21 ಬಗೆಯ ಪತ್ರೆ ಅಥವಾ ಎಲೆಗಳ ವಿಧ್ಯುಕ್ತ ಪಾತ್ರವಿದೆ. ಇವು ಔಷಧಿಯ ಗುಣಗಳಿಂದಲೂ ಕೂಡಿದ್ದು, ಆಯುರ್ವೇದದಂಥ ಪ್ರಾಚೀನ ವೈದ್ಯ ಪದ್ಧತಿಯಲ್ಲಿ ಇಂದಿಗೂ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿವೆ. ವೇದ–ಪುರಾಣ–ಜಾನಪದ ಕಥನ ರಾಶಿಯಲ್ಲಿ ಇವುಗಳ ಉಲ್ಲೇಖಗಳು ಹೇರಳವಾಗಿವೆ. ಒಂದೊಂದೇ ಪತ್ರೆಗಳ ಮಾಹಿತಿಯನ್ನು ನೀಡುವುದೇ ನಮ್ಮ ಉದ್ದೇಶವಾಗಿದೆ.

### 13. ಬೃಹತೀ (ಹೆಗ್ಗುಳ್ಳ)

ಸಂಸ್ಕೃತ: ಮಹತೀ, ಸಿಂಬೀ, ಕ್ಷುದ್ರ, ವಾರ್ತಾಕಿ
ಹಿಂದಿ: ಬಾರಹಂತ, ಬಡೀಕಟೇರಿ
ತಮಿಳು: ತೆಲ್ಲ ಮೂಲಕಂ
ತೆಲುಗು: ಪೆದ್ದಮೂಲಕಮು
ಇಂಗ್ಲಿಷ್: ಇಂಡಿಯನ್ ನೈಟ್ ಶೇಡ್
ವೈಜ್ಞಾನಿಕ ಹೆಸರು: Solanum Indicum

ಈ ಗಿಡ ಭಾರತದೆಲ್ಲೆಡೆಗಳಲ್ಲೂ ಬೆಳೆಯುತ್ತದೆ. ಬದನೆಯ ಜಾತಿಗೆ ಸೇರಿದ ಹೆಗ್ಗುಳ್ಳವೂ ಆಯುರ್ವೇದ ಔಷಧಿಗಳಲ್ಲಿ ಬಳಸುವ 'ದಶಮೂಲ'ಗಳಲ್ಲಿ ಒಂದು. ಇದು ಮುಳ್ಳುಗಳಿಂದ ಕೂಡಿದ ಗಿಡ. ಇದರ ಕಾಂಡಗಳು ನಕ್ಷತ್ರಾಕಾರದಲ್ಲಿರುತ್ತವೆ. ಇದಕ್ಕೆ ನೀಲಿಬಣ್ಣದ ಹೂಗಳಿದ್ದು, ಹಣ್ಣುಗಳು ಹಳದಿ ಬಣ್ಣದಿಂದ ಕೂಡಿರುತ್ತವೆ.

ಸಾಂಖ್ಯರ 'ಗೃಹ್ಯಸೂತ್ರ'ದಲ್ಲಿ ಹೆಗ್ಗುಳ್ಳವನ್ನು ಅರೆದು ಸೂತಿಕಾಗಾರ (ಹೆರಿಗೆ ಕೋಣೆ)ದ ಒಳಗೋಡೆಗಳಿಗೆ ಲೇಪಿಸುತ್ತಿದ್ದರೆಂಬ ಉಲ್ಲೇಖವಿದೆ. 'ಕೌಶಿಕಸೂತ್ರ'ದಲ್ಲಿ ಇದನ್ನು ಪುಂಸವನ ಕರ್ಮದಲ್ಲಿ ಉಪಯೋಗಿಸುತ್ತಿದ್ದರೆಂಬ ವಿವರವಿದೆ. ಅಥರ್ವ ವೇದ ಮತ್ತು ಸಮವಿಧಾನ ಬ್ರಾಹ್ಮಣದಲ್ಲಿಯೂ ಬಿಳಿ ಹೂವಿನ ಹೆಗ್ಗುಳ್ಳವನ್ನು ಉಲ್ಲೇಖಿಸಲಾಗಿದೆ. 'ಕೈಯದೇವ ನಿಘಂಟು'ವಿನಲ್ಲಿ 11 ವಿಧದ ಬೃಹತಿಯ ಬಗೆಗೆ ತಿಳಿಸಲಾಗಿದೆ.



**ಉಪಯುಕ್ತ ಭಾಗಗಳು: ಬೇರು ಮತ್ತು ಹಣ್ಣು.**

ರಾಸಾಯನಿಕ ಘಟಕಗಳು: ಸೊಲಾನಿನ್, ಕೆರೋಟಿನ್, ಕಾರ್ಪಿಸ್ಟೆರಾಲ್, ಸೊಲಾನೋ ಕಾರ್ಪೋನ್, ಡೈಸೋಜೆನಿನ್, ಬೀಟಾ–ಸಿಟೋಸ್ಟಿ ರಾಲ್, ಸೊಲಾಸೋನಿನ್.

**ಔಷಧೀಯ ಗುಣಗಳು**

- ಹೊಟ್ಟೆನೋವು ಇದ್ದರೆ ಹೆಗ್ಗುಳ್ಳದ ಬೇರನ್ನು ಪುಡಿ ಮಾಡಿ, ಮಜ್ಜಿಗೆಯಲ್ಲಿ ಬೆರೆಸಿ ಕುಡಿಯಬೇಕು.
- ತಲೆ ಯಲ್ಲಿ ದುಂಡನೆ ನಾಣ್ಯದಾಕಾರದಲ್ಲಿ ಕೂದಲು ಉದು ರುತ್ತಿದ್ದಲ್ಲಿ ಹೆಗ್ಗುಳ್ಳದ ಹಣ್ಣನ್ನು ನೀರಿನಲ್ಲಿ ಅರೆದು ಲೇಪಿಸಬೇಕು. ಆ ಜಾಗದಲ್ಲಿ ತಾಜಾ ಹಣ್ಣನ್ನು ಉಜ್ಜಿ ಉಜ್ಜಬೇಕು.
- ಹೃದ್ರೋಗಗಳಿಂದ ಬಳಲುವವರು ಹೆಗ್ಗುಳ್ಳದ ಬೇರಿನ ಪುಡಿಯನ್ನು ಸೇವಿಸಬೇಕು.
- ಇದು ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ.
- ಚರ್ಮರೋಗಗಳಲ್ಲಿ ಹೆಗ್ಗುಳ್ಳವನ್ನು ಅರೆದು ಲೇಪಿಸಿದರೆ ನವೆ ಕಡಿಮೆಯಾಗುತ್ತದೆ.
- ವಾಂತಿ, ಜಂತುಹುಳು ಮತ್ತು ಹರ್ಪಿಸ್‌ಗಳಲ್ಲಿಯೂ ಬೃಹತೀ ಉಪಯುಕ್ತ.
- ಮೈಕೈ ನೋವು, ಬಿಕ್ಕಳಿಕೆ, ಸ್ವರ ಒಡೆದಿದ್ದಲ್ಲಿ ಹೆಗ್ಗುಳ್ಳ ಬಳಸಬೇಕು.
- ಗಾಯ ಮತ್ತು ಹುಣ್ಣುಗಳಾಗಿದ್ದಲ್ಲಿ ಅವುಗಳನ್ನು ಹೆಗ್ಗುಳ್ಳದ ಕಷಾಯದಿಂದ ತೊಳೆಯಬೇಕು. ಜೊತೆಗೆ ಹೆಗ್ಗುಳ್ಳವನ್ನು ಎಳ್ಳೆಣ್ಣೆಯಲ್ಲಿ ಬೆರೆಸಿ, ತೈಲ ತಯಾರಿಸಿ ಲೇಪಿಸಿಕೊಳ್ಳಬೇಕು.
- ಹೆಗ್ಗುಳ್ಳದ ಹೂಗಳಿಂದ ತಯಾರಿಸಿದ ಅಂಜನವನ್ನು ಕಣ್ಣಿಗೆ ಲೇಪಿಸಿಕೊಂಡಲ್ಲಿ ಕಣ್ಣಿನ ಕಾಯಿಲೆಗಳು ವಾಸಿಯಾಗುತ್ತವೆ.
- ಪದೇ ಪದೇ ಗರ್ಭಪಾತವಾಗುತ್ತಿದ್ದಲ್ಲಿ ಗರ್ಭ ಧರಿಸಿದ ಆರಂಭದಿಂದಲೇ ಹೆಗ್ಗುಳ್ಳದ ಸೇವನೆ ಉಪಯುಕ್ತ. ಇದು ಗರ್ಭದ ಬೆಳವಣಿಗೆಗೆ ಸಹಕಾರಿಯಾಗುವುದಲ್ಲದೆ ಆರೋಗ್ಯಕರ ಮಗುವಿನ ಜನನಕ್ಕೂ ಅನುಕೂಲಕಾರಿ.

**–ಸುಬ್ರಹ್ಮಣ್ಯ ಶರ್ಮ**

## ನನ್ನ ಮಾತು





# ತಂತ್ರ–ಅತಂತ್ರ–ಪ್ರತಿತಂತ್ರ

ನೀವು ಏನೇ ಮಾಡಿ ರಾಜಕಾರಣವನ್ನು ಜನ ಸಾವಾನ್ಯರೊಂದಿಗೆ ವಾಡಬೇಡಿ. ಅಂತೂ ಇಂತು ಅಧಿಕಾರ ಸಿಕ್ಕಿದೆ. ಅದನ್ನು ಉಳಿಸಿಕೊಳ್ಳಲು ಉತ್ತಮ ಕೆಲಸವನ್ನು ಜನಸಾವಾನ್ಯರಿಗೆ ವಾಡಿ. ಜನರಿಂದ, ಜನರಿಗಾಗಿ, ಜನರಿಗೋಸ್ಕರ ಪ್ರಜಾಪ್ರಭುತ್ವದ ಪ್ರಕಾರ ನೀವು ಕಾರ್ಯ ಮಾಡುತ್ತಿದ್ದೀರಾ ಎಂದು ನೀವೇ ಪ್ರಶ್ನಿಸಿಕೊಳ್ಳಿ.

ಜನಸಾವಾನ್ಯರ ಪ್ರಕಾರ ಒಳ್ಳೆಯದಾಗ ಬೇಕೆಂದರೆ ನೀವು ಕೆಲಸ ಮಾಡುವುದರಿಂದ ನೂರು ರೂ.ಗೆ ಸಿಗುವ ವಸು 60–70 ರೂ.ಗೆ ಸಿಗಬೇಕು. ಮನೆ ಖರ್ಚಿಗೆ ತಿಂಗಳಿಗೆ 7–8 ಸಾವಿರ ಆಗುತ್ತಿದ್ದರೆ ಅದು 5–6 ಸಾವಿರ ಆಗಬೇಕು. ಆಗ ಸರ್ಕಾರ ಹಾಗೂ ಜನಪ್ರತಿ ನಿಧಿಗಳು ಒಳ್ಳೆಯ ಕಾರ್ಯ ಮಾಡುತ್ತಿದ್ದಾರೆ ಎಂದು ಅರ್ಥ.

ಜನಪ್ರತಿನಿಧಿಗಳಿಗೆ ಎಲ್ಲಾ ಸವಲತ್ತುಗಳು ಸರ್ಕಾರದಿಂದ ಸಿಗುತ್ತದೆ. ಅದರ ಜೊತೆಗೆ ಸಂಬಳವೂ ದೊರೆಯುತದೆ. ಈಗ ಹೇಳಿ ಆಯ್ಕೆ ಮಾಡಿ ಕಳುಹಿಸಿದ ಮತದಾರರೊಂದಿಗೆ ಪ್ರತಿನಿತ್ಯ ಎಷ್ಟು ಗಂಟೆ ಅವರೊಡನೆ ಬೆರೆಯುತ್ತೀರಿ ಎಂದು. ಏಕೆಂದರೆ ಅವರಿಂದಲೇ ಎಲ್ಲವೂ ನಿಮಗೆ ಸಿಗುವುದರಿಂದ ಅವರಿಗೆ ಸುಲಭವಾಗಿ ನೀವು ಸಿಗಲೇಬೇಕಲ್ಲವೆ? ಇಲ್ಲ ಅಂದರೆ ನಿಮಗೆ ಸಂಬಳವೇಕೆ? ಪದವಿ ಯಾಕೆ ಬೇಕು? ಹೇಗೋ ಬೆಳಗಾಂನಲ್ಲಿ ಮತ್ತೊಂದು ವಿಧಾನಸೌಧ ಕಟ್ಟಿಯಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ನಿಮಗೆ ಮತ ಸಿಗೋಲ್ಲವಾದ್ದರಿಂದ ಅವರ ಪಾಡಿಗೆ ಅವರನ್ನು ಬಿಟ್ಟುಬಿಡಿ. ಅದರಿಂದ ನಿಮಗೇನು ತೊಂದರೆ? ಅವರಿಗೆ ಸಹಾಯವೂ ಇಲ್ಲ, ಸಹಾನುಭೂತಿಯೂ ಇಲ್ಲ. ಮುಷ್ಕರಗಳು ಇವೆ ಎಂದರೆ ನಿಮ್ಮ ಬಗ್ಗೆ ಅವರಿಗೆ ಒಲವಿಲ್ಲ, ನಂಬಿಕೆ ಇಲ್ಲ ಎಂದರ್ಥ. ಅವರನ್ನು ಬದುಕಲು ಬಿಡಿ, ಇಲ್ಲ ಅವರನ್ನು ತೃಪ್ತಿಕರವಾಗಿ ಬದುಕಿಸಿ.

ಒಂದು ಯೋಚನೆ ಜನರಲ್ಲಿ ಬಂದಿದೆ. ಅದೇನೆಂದರೆ ರಾಷ್ಟ್ರಪತಿ ಆಡಳಿತ ಸಮಯದಲ್ಲಿ ಸರ್ಕಾರ ನಡೆಯುವುದಿಲ್ಲವೇ? ಅದೇ ರೀತಿ ಸರ್ಕಾರ ರಾಜ್ಯವನ್ನು ನಡೆಸಲಿ. ಅದಕ್ಕೆ ಜನಪ್ರತಿನಿಧಿಗಳು, ಶಾಸಕರು, ಮಂತ್ರಿಗಳು ಬೇಕೇಬೇಕು. ಕೆಲಸ ಮಾಡುವವರು ತಹಸೀಲ್ದಾರ್, ಎಸಿ, ಡಿಸಿ, ಕಮಿಷನರ್, ವಿಧಾನಸೌಧದಲ್ಲಿರುವ ಸರ್ಕಾರಿ ನೌಕರರೇ ಕೆಲಸ ಮಾಡುವುದು. ನಿಮಗೇಕೆ ಸಂಬಳ, ಎಲ್ಲಾ ಸರ್ಕಾರಿ ಸವಲತ್ತುಗಳು ಎಂಬುದು ಜನಸಾಮಾನ್ಯರ ಮಾತಾಗಿದೆ. ರೇಷನ್ ಅಕ್ಕಿ 20*30ರಲ್ಲಿನ ಮನೆ, ಸರ್ಕಾರಿ ಶಾಲೆ, ಸರ್ಕಾರಿ ಆಸ್ಪತ್ರೆ, ಸರ್ಕಾರಿ ವಾಹನವನ್ನು ರಾಜ ಕಾರಣಿಗಳು ಮೊದಲು ಉಪಯೋಗಿಸಿಕೊಳ್ಳಬೇಕು. ಆಗ ಜನಸಾವಾನ್ಯರ ಸ್ಥಿತಿಗತಿ ಅರ್ಥವಾಗುತ್ತದೆ. ಇದು ಸರಿಯೋ ತಪ್ಪೋ ರಾಜಕಾರಣಿಗಳೇ ನೀವೇ ಯೋಚಿಸಿ.

ಸಂಪಾದಕ
**ಹೆಚ್.ವಿ. ಸುಬ್ಬರಾವ್**
ನಿವೃತ್ತ ಸಾ.ಶಿ.ಇ. ನೌಕರ


## ಮಹಿಳಾ ವಿಶೇಷ

**ಕನ್ನಡ ತಿಂಗಳ ಪತ್ರಿಕೆ**

**ಆಗಸ್ಟ್ 1 ರಿಂದ 31–2018**

**ಸಂಪುಟ 3, ಸಂಚಿಕೆ 12,**

**ಪುಟ 16 ಬೆಲೆ ರೂ.: 10**

**MAHILA VISHESHA**

**KANNADA MONTHLY**

**August 1 to 31 -2018**

Vol : 3 **Issue : 12 Pages : 16**

**Price : Rs.10/-**

**ಮುಖಪುಟ :**

**ಗೊರವನಹಳ್ಳಿ ಶ್ರೀ ಮಹಾಲಕ್ಷ್ಮಿ ದೇವಸ್ಥಾನ,**

**ಗೌರವ ಸಂಪಾದಕರು :**

**ಶ್ರೀಮತಿ ಸತ್ಯಭಾಮಾ ದಾಸ್**

**ಶ್ರೀಮತಿ ಗೀತಾ ರಾವ್**

**ಸಂಪಾದಕರು :**

**ಹೆಚ್.ವಿ.ವೆಂಕಟಸುಬ್ಬರಾವ್**

**ಮೊಬೈಲ್ 9243584444**

**ಉಪಸಂಪಾದಕರು :**

**ಎಸ್.ವೆಂಟಕರವಣಪ್ಪ**

**ಎಂ.ಆರ್. ಜಯಪ್ರಕಾಶ ನಾರಾಯಣ**

**ಭಾಸ್ಕರ್ ಹೆಚ್.ವಿ.**

**ಮೂರ್ತಿ ಜಿ.ಎನ್.**

**ಕಚೇರಿ ವಿಳಾಸ :**

**ಮಹಿಳಾ ವಿಶೇಷ**

**ನಂ. 136, ಶ್ರೀ ನೀಲಕಂಠಸ್ವಾಮಿ ಮಠ,**
**ಗನ್‌ಹೌಸ್ ಎದುರು, ಖಿಲ್ಲೆ ಮೊಹಲ್ಲಾ,**
**ಮೈಸೂರು – 570004**

**E-mail:**
**mahilavishesha15@gamil.com**
**Web: www.mahilavishesha.in**
**Whatsapp No : 8880334444**

# ಶ್ರೀ ವರಮಹಾಲಕ್ಷ್ಮಿ ವ್ರತ

ಜಾಜಿ, ಮಲ್ಲಿಕಾ, ಚಂಪಕಾ, ಪುನ್ನಾಗ, ಕೇತಕಿ ಈ ಸುಗಂಧಿಭರಿತ ಪಂಚಪುಷ್ಪಗಳು ಸನಾತನ ಸಂಸ್ಕೃತಿಯಲ್ಲಿ ಪ್ರಸಿದ್ಧವಾದವು.



ಶ್ರಾವಣಮಾಸದ ಪೌರ್ಣಿಮೆಯ ಹಿಂದಿನ ಶುಕ್ರವಾರ ದಂದು ಶ್ರೀ ವರಮಹಾಲಕ್ಷ್ಮಿ ವ್ರತವನ್ನು ಆಚರಿಸುವುದು ಸಂಪ್ರದಾಯ. ಅಷ್ಟೈಶ್ವರ್ಯಕ್ಕೆ ಪ್ರಧಾನ ದೇವತೆ ಶ್ರೀ ಲಕ್ಷ್ಮಿ. ಈ ದೇವತೆಯನ್ನು ಶ್ರಾವಣಮಾಸದ ಕೊನೆಯ ಶುಕ್ರವಾರದಂದು ಪೂಜಿಸಿದ ಭಕ್ತರಿಗೆ ಸಕಲ ಸೌಭಾಗ್ಯವೂ ಲಭಿಸುವುದೆಂದು ಪ್ರತೀತಿ. ಆ ದಿನ ಮುಂಜಾವಿನಲ್ಲೇ ಸುಮಂಗಲಿಯರು ಎದ್ದು ಅಭ್ಯಂಜನ ಸ್ನಾನ ಮಾಡಿ ದೇವಿ ಪೂಜೆಗೆ ಅಣಿ ಮಾಡಿಕೊಳ್ಳುವ ಸಂದರ್ಭದಲ್ಲಿ, ಅವರ ಸಡಗರ ಸಂಭ್ರಮವೇ ಕಣ್ಣಿಗೊಂದು ಮಹಾದಾನಂದ. ಸಾಲಂಕೃತವಾದ ಸುಮಂಗಲಿಯರು, ದೇವಿಗೂ ಕೂಡ ಅಷ್ಟೇ ಅಕ್ಕರೆಯಿಂದ ಅಲಂಕರಿಸುತ್ತಾರೆ. ಒಟ್ಟು ಕುಟುಂಬವಾದರೆ, ಮನೆಯ ಹಿರಿಯ ಸುಮಂಗಲಿಯರು ಒಟ್ಟಾಗಿ ಕೂತು ದೇವತಾ ಕಾರ್ಯವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಕಲಶಸ್ಥಾಪನೆಯಲ್ಲಿ ಸಂಪ್ರದಾಯಕ್ಕನುಗುಣವಾಗಿ ಎರಡು ಪ್ರಮುಖ ಪದ್ಧತಿ ಇದೆ. ಮೊದಲನೆಯದಾಗಿ ಬೆಳ್ಳಿ ಚೊಂಬನ್ನು ಚೆನ್ನಾಗಿ ಶುಚಿಗೊಳಿಸಿ ಅದರ ಮೇಲೆ ಒಂದು ಪಾರ್ಶ್ವದಲ್ಲಿ ಕುಂಕುಮದಿಂದ ದೇವಿಯ ಅಂಗಾಂಗಗಳನ್ನು ನಿರ್ದಿಷ್ಟ ಆಭರಣಗಳನ್ನು ತೊಡಿಸುತ್ತಾರೆ. ನಂದಿಬಟ್ಟಲು ಹೂವಿನ ರಸದಿಂದ ಕಾಡಿಗೆಯನ್ನು ತಯಾರಿಸಿ, ದೇವಿಯ ಕಣ್ಣುಗಳಿಗೆ ಲೇಪಿಸುತ್ತಾರೆ. ಇತ್ತೀಚೆಗೆ ಆಧುನಿಕ ವಿವಿಧ ಅಲಂಕಾರ ವಸ್ತುಗಳನ್ನೂ ಬಳಸಿಕೊಂಡು ದೇವಿಯನ್ನಲಂಕರಿಸುತ್ತಾರೆ. ಬೆಳ್ಳಿಯ ಚೊಂಬಿನ ಮೇಲೆ ಒಂದು ತೆಂಗಿನಕಾಯಿಯನ್ನು ಜುಟ್ಟು ಮೇಲೆ ಬರುವಂತೆ ಕೂರಿಸುತ್ತಾರೆ. ತೆಂಗಿನಕಾಯಿಯನ್ನು ಸಂಪೂರ್ಣವಾಗಿ ಹರಿಶಿನದಿಂದ ಲೇಪಿಸಿ, ಊರ್ಧ್ವಭಾಗದಲ್ಲಿ ಕುಂಕುಮವನ್ನು ಅಡ್ಡಲಾಗಿಟ್ಟು ಅದರ ಎರಡೂ ಪಾರ್ಶ್ವಗಳಲ್ಲಿ ಹರಿಶಿನವನ್ನೂ ಇಡುವುದು ಒಂದು ಸಂಪ್ರದಾಯ. ಬೆಳ್ಳಿಯ ಕಲಶದ ಒಳಗೆ ಅಕ್ಕಿ, ಹಣ್ಣುಗಳು, ಗೋಡಂಬಿ, ದ್ರಾಕ್ಷಿ, ಖರ್ಜೂರ, ಬಾದಾಮಿ, ಕಲ್ಲುಸಕ್ಕರೆಯೆಲ್ಲವನ್ನೂ ದಕ್ಷಿಣೆಯ ಜೊತೆಗೆ ಹಾಕುತ್ತಾರೆ. ಮಣೆಯ ಮೇಲೆ ರಂಗೋಲಿ ಹಾಕಿ,. ಒಂದು ಬೆಳ್ಳಿ ತಟ್ಟೆಯಲ್ಲಿ ಅಕ್ಕಿ, ದಟ್ಟಣೆ ಹಾಕಿಟ್ಟು ಅದರ ಮೇಲೆ ಈ ಅಲಂಕರಿಸಿದ ಚೊಂಬನ್ನು ಇಡುತ್ತಾರೆ. ತೆಂಗಿನಕಾಯಿಯ ತುದಿಗೆ ಅಂದರೆ ಜುಟ್ಟಿರುವ ಭಾಗದಲ್ಲಿ ಹೂವಿನ ಹಾರ ಸುತ್ತಿರುತ್ತಾರೆ.

ಆ ತಟ್ಟೆಯಲ್ಲಿ ಬೆಳ್ಳಿಯ ಅಥವಾ ತಾಮ್ರದ ಅಥವಾ ಪಂಚಲೋಹದ ಗಣಪತಿ, ಲಕ್ಷ್ಮಿ, ನಾರಾಯಣರ ವಿಗ್ರಹಗಳನ್ನು ಇಟ್ಟಿರುತ್ತಾರೆ. ಪೂರ್ವಾಭಿಮುಖವಾಗಿ ಈ ಸಿದ್ಧಪಡಿಸಿದ ಕಲಶದ ತಟ್ಟೆಯನ್ನು ಇಟ್ಟು ಮೊದಲು ಗಣಪತಿ ಪೂಜೆಯನ್ನು ಮಾಡಿ ನಂತರ ಯಮುನಾ ಪೂಜೆಯನ್ನು ಮಾಡುತ್ತಾರೆ. ವಿಘ್ನೇಶ್ವರ, ಯಮುನೆಗೆ ಸಂಕ್ಷಿಪ್ತವಾಗಿ ಪೂಜೆ ಮಾಡಿದ ಮೇಲೆ ಆರತಿ ಎತ್ತಿ ಪೂಜೆ ಮಾಡಿದ ಮನೆಯ ಮುಂದಿನ ಭಾಗದಲ್ಲಿರುವ ಬೃಂದಾವನದವರೆಗೂ ಈ ಪೂಜೆ ಮಾಡಿದ ಕಲಶವನ್ನು ಘಂಟಾನಾದದೊಂದಿಗೆ ಶ್ರದ್ಧಾಭಕ್ತಿಯಿಂದ ಮನೆಯ ಹಿರಿಯ ಪುರುಷರೊಬ್ಬರು ತಂದು, ತುಳಸೀ ಗಿಡದ ಸಮೀಪದಲ್ಲಿಟ್ಟು ಪುನಃ ಸಂಕ್ಷಿಪ್ತ ಪೂಜೆಯನ್ನು ಮಾಡಿ ದೇವಿಯನ್ನು ಒಳಗೆ ಬರಮಾಡಿಕೊಳ್ಳುತ್ತಾರೆ. ಆಗ ಸ್ತ್ರೀಯರು ಒಕ್ಕೊರಲಿನಿಂದ "ಭಾಗ್ಯದ ಲಕ್ಷ್ಮೀ ಬಾರಮ್ಮ" ದೇವರನಾಮ

ವನ್ನು ಹಾಡುತ್ತಾ ದೇವಿಯನ್ನು ಬರಮಾಡಿ ಕೊಳ್ಳುತ್ತಾರೆ.

ಒಳಗೆ ಕರೆತಂದ ಶ್ರೀ ಲಕ್ಷ್ಮಿದೇವಿಯನ್ನು ಸುಂದರವಾಗಿ ಹೂವು, ಹಣ್ಣುಗಳಿಂದ ಅಲಂಕೃತ ವಾದ ಮಂಟಪದಲ್ಲಿ ಕೂರಿಸುತ್ತಾರೆ. ನಂತರ ಕ್ರಮವಾಗಿ ಗಣಪತಿ ಪೂಜೆಯನ್ನು ಸಂಕ್ಷಿಪ್ತವಾಗಿ ಮಾಡುತ್ತಾರೆ. ಪುರೋಹಿತರು ಪ್ರಾಣಪ್ರತಿಷ್ಠೆ ಮಂತ್ರವನ್ನು ಹೇಳುತ್ತಿರುವಾಗ, ಮನೆಯ ಹಿರಿಯ ಸುಮಂಗಲಿಯು, ಕಲಶವನ್ನು ಶ್ರದ್ಧೆಯನ್ನು ಬಲಗೈ ಯಿಂದ ಹಿಡಿದುಕೊಂಡು ಪ್ರಾಣ ಪ್ರತಿಷ್ಠೆಯನ್ನು ಮಾಡುವುದು ಸಂಪ್ರದಾಯ. ನಂತರ ದ್ವಾರ ಪಾಲಕರ ಪೂಜೆ ಇತ್ಯಾದಿಗಳನ್ನು ಮಂತ್ರೋಕ್ತವಾಗಿ ಮಾಡಿ ದೇವಿಯ ಬಲಗಡೆ ಒಂದು ವಿಳ್ಳೆದೆಲೆಯ ಮೇಲೆ ಪೂಜೆಯ ನಂತರ ಸುಮಂಗಲಿಯರು ಕಟ್ಟಿಕೊಳ್ಳಬೇಕಾದ ದೋರಗಳನ್ನು (ದಾರ) ಇಟ್ಟು ಅದಕ್ಕೆ ಪೂಜೆಯನ್ನು ಸಲ್ಲಿಸುತ್ತಾರೆ. ಮುಂದೆ ಕ್ರಮವಾಗಿ ಷೋಡಶೋಪಚಾರ ಪೂಜೆಯನ್ನು ಮಾಡಿದ ನಂತರ ಸುಮಂಗಲಿಯರ ಪತಿಯರು ಅವರವರ ಪತ್ನಿಯರ ಬಲಗೈಯಿಗೆ ಆ ದಾರವನ್ನು ಕಟ್ಟುತ್ತಾರೆ. ಹಿರಿಯ ಸುಮಂಗಲಿಯು ಇತರ ಎಲ್ಲಾ ಸುಮಂಗಲಿಯರಿಗೂ ಈ ದಾರವನ್ನು ಕಟ್ಟುವುದು ಕೂಡ ರೂಢಿಯಲ್ಲಿದೆ. ದಾರವನ್ನು ಕಟ್ಟಿಸಿಕೊಂಡ ಸುಮಂಗಲಿಯರು, ಕಟ್ಟಿದ ಸುಮಂಗಲಿಗೆ ಮಂಗಳ ದ್ರವ್ಯಗಳನ್ನು ಕೊಟ್ಟು, ದಾರ ಕಟ್ಟಿಸಿಕೊಳ್ಳುವಾಗ ತನ್ನ ಎರಡೂ ಕೈಗಳಿಂದ ಹಿಡಿದುಕೊಂಡಿರುವ ವಿಳ್ಳೆದೆಲೆ ಹಾಗೂ ಹಣ್ಣನ್ನು ದಕ್ಷಿಣೆ ಸಮೇತ ಆ ಸುಮಂಗಲಿಗೆ ಕೊಟ್ಟು ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ. ಪೂಜಾವಿಧಾನವೆಲ್ಲಾ ಸಮಾಪ್ತಿ ಯಾದ ಮೇಲೆ ಪುರೋಹಿತರಿಗೆ ಉಪಾಯನ ದಾನವನ್ನು ನೀಡುವುದು ಮುಂದಿನ ಒಂದು ಕ್ರಮ. ಪುರೋಹಿತರಿಗೆ ಗಂಧ, ಹೂವು ಕೊಟ್ಟು, ಅವರ ಶಿರದ ಮೇಲೆ ಅಕ್ಷತೆಯನ್ನು ಹಾಕಿ, ಪೂಜಿಸಿ, ಒಂದು ತಟ್ಟೆಯಲ್ಲಿ ಹಣ್ಣುಗಳು, ಎರಡು ತೆಂಗಿನ ಕಾಯಿ, ವಿಳ್ಳೆದೆಲೆ, ಅಡಿಕೆ ಹಾಗೂ ನೈವೇದ್ಯಕ್ಕೆ ಇಟ್ಟ ಸಿಹಿತಿಂಡಿ, ಕರಿದ ತಿಂಡಿಗಳನ್ನು, ದಕ್ಷಿಣೆ ಯನ್ನೂ ಇಟ್ಟು ಈ ದ್ರವ್ಯಗಳ ಮೇಲೆ ಪೂಜೆ ಮಾಡಿದ ಹಿರಿಯ ಸುಮಂಗಲಿಯು ಒಂದು ಉದ್ಧರಣೆ ತೀರ್ಥವನ್ನು ಹಾಕಿ, ಪುರೋಹಿತರಿಗೆ ನೀಡಿ ನಮಸ್ಕರಿಸುತ್ತಾರೆ. ನಂತರ ಮನೆಯವರೆಲ್ಲಾ ಪುರೋಹಿತರಿಗೆ ನಮಸ್ಕರಿಸಿ ಅವರ ಆಶೀರ್ವಾದ ಪಡೆಯುತ್ತಾರೆ. ಆ ನಂತರ ದೇವಿಗೆ ಹಾಡನ್ನು ಹೇಳುತ್ತಾ ಆರತಿ ಬೆಳಗುತ್ತಾರೆ. ಸಂಜೆ ಅನೇಕ ಸುಮಂಗಲಿಯರನ್ನೂ, ನೆಂಟರಿಷ್ಟರನ್ನೂ ಕರೆದು ದೇವಿಯ ಪ್ರಸಾದವನ್ನು ನೀಡುತ್ತಾರೆ. ಮಾರನೆಯ ದಿನ ಬೆಳಗ್ಗೆ ನಿತ್ಯ ಕರ್ಮಗಳನ್ನೂ ಮುಗಿಸಿಕೊಂಡು, ದೇವಿಗೆ ಪುನಃ ಪೂಜೆಯನ್ನು ಮಾಡಿ, ಶಾಸ್ತ್ರೋಕ್ತ ವಾಗಿ ಕದಲಿಸುತ್ತಾರೆ. ಕೆಲವರು ಈ ಮಾರನೆಯ ದಿನ ಸಂಜೆ ಎಲ್ಲರನ್ನೂ ಕರೆದು ಗೌರವಿಸುತ್ತಾರೆ., ಈ ದೇವಿ ಕಲಶವನ್ನು ದೇವರಮನೆಯಲ್ಲಿ ಮುಂದಿನ ಶುಕ್ರವಾರದವರೆಗೂ ಇಟ್ಟಿದ್ದು, ಆ ಶುಕ್ರವಾರ ಕಲಶದಲ್ಲಿರುವ ಅಕ್ಕಿಯಿಂದಲೇ ಬೆಲ್ಲದ ಅನ್ನವನ್ನೂ, ಕಲಶದ ಮೇಲಿಟ್ಟಿದ್ದ ತೆಂಗಿನಕಾಯಿ ಯಿಂದ ಕೊಬ್ಬರಿ ಮಿಠಾಯಿಯನ್ನೂ ಮಾಡಿ, ಎಲ್ಲರಿಗೂ ಪ್ರಸಾದರೂಪಕವಾಗಿ ನೀಡುವುದು ಸಂಪ್ರದಾಯ. ವ್ರತದ ದಿನ ಸಂಜೆ ಶ್ರೀ ವರಲಕ್ಷ್ಮಿ ವ್ರತ ಕಥೆಯನ್ನು ಮನೆಯ ಹಿರಿಯರು ಓದುವುದು, ಇತರರು ಅದನ್ನು ಶ್ರದ್ಧೆಯಿಂದ ಆಲಿಸುವುದೂ ಒಂದು ಸಂಪ್ರದಾಯ.



**ಶ್ರೀಮತಿ ಇಂದಿರಾ ಗೋವಿಂದ್**
ಮೈಸೂರು
(ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ನಾಗರಪಂಚಮಿ ಹಾಗೂ ತಿರುಓಣಂ ಬಗ್ಗೆಯೂ ಸಹಾ ಈ ಲೇಖಕರೇ ಬರೆದಿರುತ್ತಾರೆ)

**ನಿಮಗೆ ತಿಳಿದಿರಲಿ**

ಪ್ರಪಂಚದಲ್ಲಿ ಅತಿ ಮಧುರವಾದ ಜೋಡಿ ಯಾವುದು ಗೊತ್ತಾ...?
ನಗು ಮತ್ತು ಅಳು...
ಯಾವತ್ತೂ ಪರಸ್ಪರ
ಭೇಟಿಯಾಗೋದೇ ಇಲ್ಲ... ಆಕಸ್ಮಾತ್
ಭೇಟಿಯಾದರೆ ಆ ಕ್ಷಣವನ್ನು ಯಾವತ್ತೂ ಮರೆಯಕ್ಕಾಗಲ್ಲ

# ತಿರು ಓಣಂ



ಕೇರಳ ರಾಜ್ಯದ ಒಂದು ಸಾಂಸ್ಕೃತಿಕ ಸುಂದರ ಹಬ್ಬ ಓಣಂ. ವಡಮಾ ಐಯ್ಯರ್ ಜನಾಂಗದವರೂ ಕೇರಳ ರಾಜ್ಯದ ಮೂಲದವರಾದರೆ, ತಮ್ಮ ತವರಿನ ನೆಲೆಯಲ್ಲದೆ ಬೇರೆ ಕಡೆಗಳಲ್ಲಿ ಜೀವನಾರ್ಥವಾಗಿ ನೆಲೆಸಿದರೂ, ತಾವು ನೆಲೆಸಿರುವ ಜಾಗದಲ್ಲೇ ಸಾಂಪ್ರದಾಯಿಕವಾಗಿ ಈ ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಿಸುತ್ತಾರೆ. ಸುಗ್ಗಿಯ ದ್ಯೋತಕವೂ ಹೌದು ಈ ಹಬ್ಬ. ಪುಷ್ಪಗಳಿಂದಲೇ ವಿವಿಧ ರೀತಿಯ ರಂಗೋಲಿಗಳನ್ನು ಹಾಕಿ, ಮಧ್ಯದಲ್ಲಿ ದೀಪಗಳನ್ನಿಟ್ಟು ಪೂಜಿಸುವುದು ಈ ಹಬ್ಬದ ವೈಶಿಷ್ಟ್ಯ. ಹಿಂದೆ ವಾಮನರು ಬಲೀಂದ್ರನನ್ನು ಮೂರು ಹೆಜ್ಜೆ ದಾನ ಕೇಳಿದ ಸಂದರ್ಭದಲ್ಲಿ ಮೂರನೆಯ ಪಾದವನ್ನು ಬಲಿಚಕ್ರವರ್ತಿಯ ತಲೆಯ ಮೇಲಿಟ್ಟು, ಅವನನ್ನು ಪಾತಾಳಕ್ಕೆ ಕಳುಹಿಸಿದ ಭಗವಂತನು ಅವನ ಭಕ್ತಿಗೆ ಮೆಚ್ಚಿ, ಶಾಶ್ವತವಾಗಿ ಪಾತಾಳದಲ್ಲಿದ್ದರೂ, ಸಾಕ್ಷಾತ್ ಭಗವಂತನೇ ಅವನ ಅರಮನೆಯ ದ್ವಾರದಲ್ಲಿ ನೆಲೆಸುವೆನೆಂದು ವಾಗ್ದಾನವನ್ನು ಮಾಡಿದಷ್ಟೇ ಅಲ್ಲದೆ, ಬಲಿಚಕ್ರವರ್ತಿಯು ವರ್ಷದಲ್ಲಿ ಒಂದು ದಿನ ತನ್ನ ಭೂಲೋಕದ ಸಾಮ್ರಾಜ್ಯಕ್ಕೆ ಭೇಟಿ ಕೊಡಬಹುದೆಂದೂ, ಅಂದು ಅವನ ಪ್ರಜೆಗಳೆಲ್ಲರೂ ಸಡಗರ ಸಂಭ್ರಮದಿಂದ ಅವನನ್ನು ಸ್ವಾಗತಿಸಿ, ಪೂಜೆ ಮಾಡುವರೆಂದೂ ಅನುಗ್ರಹ ಮಾಡಿದನು. ಅಂದಿನಿಂದ ಇಂದಿಗೂ ಈ ಓಣಂ ಹಬ್ಬವನ್ನು ಈ ಒಂದು ಹಿನ್ನೆಲೆಯಲ್ಲಿ ಆಚರಿಸುವುದು ರೂಢಿಯಲ್ಲಿ ಬಂದಿದೆ. ಸ್ತ್ರೀಯರೆಲ್ಲರೂ ಬಿಳಿಯ ಸೀರೆಯನ್ನುಟ್ಟು, ಬಿಳಿ ಹೂಗಳನ್ನು ಮುಡಿದುಕೊಂಡು ಈ ರಂಗೋಲಿಯ ಸುತ್ತ ಸಡಗರ ಸಂಭ್ರಮದಿಂದ ಹಾಡು ಹೇಳುತ್ತಾ ನರ್ತಿಸುತ್ತ ಬಲೀಂದ್ರನನ್ನು ಸ್ವಾಗತಿಸುತ್ತಾರೆ. ಜೊತೆಗೆ ನಾರಾಯಣಸ್ವರೂಪನಾದ ವಾಮನನ್ನು ಕೃಷ್ಣ ರೂಪದಲ್ಲಿ ಪೂಜಿಸುತ್ತಾರೆ. ಸಿಹಿತಿನಿಸುಗಳನ್ನು ಮಾಡಿ ಭಗವಂತನಿಗೆ ಅರ್ಪಿಸಿ ಎಲ್ಲರೂ ಪರಸ್ಪರ ಹಂಚಿಕೊಂಡು ಪ್ರಸಾದರೂಪವಾಗಿ ಭುಂಜಿಸುತ್ತಾರೆ. ಕೃಷ್ಣಲೀಲೆಗಳನ್ನು ಹಾಡಿ, ಪೊಗಳಿ, ನರ್ತಿಸಿ ಆನಂದಿಸುತ್ತಾರೆ. ತಮಿಳು ಪಂಚಾಂಗದ ರೀತ್ಯ ಆವಣಿಮಾಸ, ಮಲೆಯಾಳಂ ಪಂಚಾಂಗದ ಪ್ರಕಾರ ಸೋಣಮಾಸ ಹಾಗೂ ಕರ್ನಾಟಕ ಪಂಚಾಂಗದ ರೀತ್ಯ ಭಾದ್ರಪದ ಮಾಸದಲ್ಲಿ ಈ ಹಬ್ಬವನ್ನು ಆಚರಿಸಲಾಗುವುದು.

ಅಸ್ತ(ಹಸ್ತ) ನಕ್ಷತ್ರದಿಂದ ಪ್ರಾರಂಭಿಸಿ ತಿರು ಓಣಂ ನಕ್ಷತ್ರದವರೆಗೂ 120 ದಿನಗಳ ಕಾಲ ತಮಿಳೂ ಪಂಚಾಂಗದ ರಿತ್ಯ ಆವಣಿಮಾಸದಲ್ಲಿ ಈ ಹಬ್ಬವನ್ನು ಅತ್ಯಂತ ಸಂಪ್ರದಾಯಸ್ಥರು ಕೊಂಡಾಡುವರಾದರೂ, ಆಧುನಿಕತೆಯ ಪ್ರಭಾವದಿಂದಾಗಿ 10ನೆಯ ದಿನ ಅಂದರೆ ತಿರುಓಣಂ ದಿನ ಪುರುಷರು ಹಾಗೂ ಸ್ತ್ರೀಯುರು ಬಿಳಿಪಂಚೆ ಹಾಗೂ ಬಿಳಿಸೀರೆಯನ್ನು ಉಡುವುದು ಸಂಪ್ರದಾಯ. ಈ ಎರಡೂ ಮಾದರಿಯ ಉಡುಪುಗಳಿಗೆ ಜರಿ ಅಂಚು

ಇರುವುದು ವಿಶೇಷ. ಬಹಳ ಹಿಂದೆ ಸ್ತ್ರೀಯರು 'ಮುಂಡು" ಎಂಬ ತುಂಡುಬಟ್ಟೆಯನ್ನು ಪಂಚೆ ಯಂತೆಯೇ ಧರಿಸುತ್ತಿದ್ದರು. ಆದರೆ ಈಗ ಸೀರೆ ಉಡುವುದು ಸಾಮಾನ್ಯವಾಗಿದೆ. ಈ ಹಬ್ಬದ ಸಂದರ್ಭದಲ್ಲಿ ಹಬ್ಬಕ್ಕಾಗಿಯೇ ಕೊಂಡ ಉಡುಪು ಗಳನ್ನು ಧರಿಸುವುದು ಶಾಸ್ತ್ರಬದ್ಧವಾಗಿವೆ.

ಕರ್ನಾಟಕದಲ್ಲಿ ಕಾರ್ತಿಕ ಮಾಸದಲ್ಲಿ ಆಚರಿಸುವ ಬಲಿಪಾಡ್ಯಮಿ ಹಾಗೂ ಈ ತಿರುಓಣಂ ಹಬ್ಬವು ಒಂದೇ. ಬಲಿಚಕ್ರವರ್ತಿಯನ್ನು ವರ್ಷ ಕ್ಕೊಮ್ಮೆ ಆಹ್ವಾನಿಸುವುದು ಹಾಗೂ ಈ ಸಂದರ್ಭ ದಲ್ಲಿ ವಾಮನಾವತಾರಿಯಾದ ವಿಷ್ಣುವನ್ನು ಪೂಜಿಸುವುದು ಈ ಎರಡೂ ಹಬ್ಬಗಳ ಸಮಾನ ವೈಶಿಷ್ಟ್ಯ.

ಓಣಂ ದಿನ ಬಹಳ ಸಡಗರ ಸಂಭ್ರಮ ದಿಂದ ಪ್ರತಿಯೊಬ್ಬರೂ ಹಬ್ಬವನ್ನಾಚರಿಸುತ್ತಾರೆ. ನೇಂದ್ರಬಾಳೆ ಬಹಳ ವಿಶಿಷ್ಟವಾದ ಹಣ್ಣಾಗಿರುವ ಕಾರಣ, ಈ ಹಣ್ಣಿನಿಂದ ನಾನಾ ವಿಧ ತಿನಿಸುಗಳನ್ನು ಈ ಹಬ್ಬದಲ್ಲಿ ತಯಾರು ಮಾಡಿ ವಾಮನಾವತಾರಿ ಯಾದ ವಿಷ್ಣು ಅಥವಾ ಕೃಷ್ಣನಿಗೆ ನಿವೇದಿಸುತ್ತಾರೆ. ಇಂದಿನ ವಿಶೇಷ ತಿನಿಸುಗಳೆಂದರೆ ಅವಿಯಲ್, ಪಾಲ್ ಪಾಯಸಂ, ನೇಂದ್ರವಾಳೆಚಿಪ್ಸ್, ಅಡಪ್ರದ ಮನ್, ಶತಸದಯಮ್, ಇಂತಹ ಸಿಹಿತಿನಿಸುಗಳ ಜೊತೆಗೆ ಕೈಮುರುಕ್ಕು ಕೂಡ ಈ ಹಬ್ಬದಲ್ಲಿ ಮಾಡುವ ಬಹಳ ಪ್ರಸಿದ್ಧವಾದ ತಿಂಡಿ.

**ಅಡಪ್ರದಮಾನ್ ತಯಾರಿಸುವ ವಿಧಾನ**

ನೆನೆಸಿಟ್ಟ ಅಕ್ಕಿಯನ್ನು ರುಬ್ಬಿ, ವಡೆತರಹ ತಟ್ಟಿ, ಹಬೆಯಲ್ಲಿಟ್ಟು ಬೇಯಿಸಿದ ನಂತರ, ಅದನ್ನು ಪುಡಿ ಪುಡಿ ಮಾಡಿ ತೆಂಗಿನಕಾಯಿ ಹಾಲಿನಿಂದ ಮಾಡಿದ ಪಾಯಸಕ್ಕೆ ಹಾಕಬೇಕು. ಒಣಶುಂಠಿ (ಶುಕ್ಕು) ಮತ್ತು ಸಣ್ಣದಾಗಿ ಕತ್ತರಿಸಲ್ಪಟ್ಟ ತೆಂಗಿನ ಚೂರುಗಳನ್ನು ತುಪ್ಪದಲ್ಲಿ ಹುರಿದು ಕೊನೆಯಲ್ಲಿ ಈ ಪಾಯಸಕ್ಕೆ ಹಾಕಿ ಒಲೆಯಿಂದ ಕೆಳಗಿಳಿಸಬೇಕು.

# ಗರುಡ ಪಂಚಮಿ/ನಾಗರಪಂಚಮಿ ಹಬ್ಬ

ದೇಹಬಲ, ಧನಬಲ, ವಿದ್ಯಾಬಲ, ಜ್ಞಾನಬಲ, ಸಂಸ್ಕಾರಬಲ, ಬಲಪಂಚಕ ಶ್ರಾವಣ ಶುದ್ಧ ಪಂಚಮಿಯ ದಿನ ನಾಗರ ಪಂಚಮಿ ಹಬ್ಬವನ್ನು ಆಚರಿಸಲಾಗುತ್ತದೆ. ಹೆಣ್ಣುಮಕ್ಕಳು ತಮ್ಮ ಒಡಹುಟ್ಟಿದ ಅಣ್ಣತಮ್ಮಂದಿರುಗಳ ಶ್ರೇಯಸ್ಸಿಗಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದ ಆಚರಣೆಯ ಹಿನ್ನೆಲೆಯಲ್ಲಿ ಒಂದು ಕತೆ ಇದೆ. ಹೆಣ್ಣು ಮಗಳೊಬ್ಬಳು ಈ ದಿನ ಹುತ್ತಕ್ಕೆ ಹಾಲೆರೆಯಲು ತಾಳೆ ಹೂವನ್ನು ತರಲು ತನ್ನ ಅಣ್ಣನನ್ನು ಕಳುಹಿಸುತ್ತಾಳೆ. ಆದರೆ ಹೂವು ತರಲು ಹೋದ ಆ ಸಹೋದರನಿಗೆ ಹಾವೊಂದು ಕಚ್ಚಿ ಮೃತನಾದನು. ಅಣ್ಣನ ಈ ಅಪಮೃತ್ಯುವಿಗಾಗಿ ಬಹಳ ಸಂಕಟಪಡುತ್ತಾ, ನಾಗದೇವತೆಯನ್ನು ಬಹಳ ಶ್ರದ್ಧಾಭಕ್ತಿಯಿಂದ ಪೂಜಿಸಿ ಪ್ರಾರ್ಥಿಸುತ್ತಾಳೆ. ಈ ಕನ್ಯೆಯ ಶ್ರದ್ಧೆಯನ್ನು ಮೆಚ್ಚಿ ನಾಗರಾಜನು ಅವಳ ಅಣ್ಣಿಗೆ ಜೀವದಾನ ಮಾಡುತ್ತಾನೆ. ಅಂದಿನಿಂದ ನಾಗಪ್ಪನಿಗೆ ಈ ದಿನದಂದು ತಪ್ಪದೆ ಹೆಣ್ಣುಮಕ್ಕಳು ತನಿ ಎರೆದು ತಮ್ಮ ಸಹೋದರರ ಒಳಿತಿಗಾಗಿ ಪ್ರಾರ್ಥಿಸುವ ಹಬ್ಬವು ಈ ನಾಗರಪಂಚಮಿ. ಸಾಮಾನ್ಯವಾಗಿ ಸಚೇಲ ಸ್ನಾನ ಮಾಡಿ, ಒದ್ದೆ ಬಟ್ಟೆಯಲ್ಲಿ ತನಿ ಎರೆಯುವುದು ಸಂಪ್ರದಾಯ. ನಮ್ಮ ವಡಮ ಪಂಗಡದಲ್ಲಿ, ಮೈಸೂರು ಪ್ರಾಂತ್ಯದಲ್ಲಿ ನೆಲೆಸಿರುವವರು ಹೆಚ್ಚಾಗಿ ಈ ಪದ್ಧತಿಯನ್ನು ಅನುಸರಿಸುತ್ತಾರೆ. ಕೆಲವರು ಮನೆಯಲ್ಲಿಯೇ ಬೆಳ್ಳಿ ನಾಗಪ್ಪನಿಗೆ ತನಿ ಎರೆದರೆ, ಇನ್ನು ಕೆಲವರು ಸಮೀಪದ ಹುತ್ತಕ್ಕೆ ಹೋಗಿ ಹಾಲೆರೆದು, ನಾಗಪ್ಪನನ್ನು ಪೂಜಿಸಿ ಬರುವುದೂ ವಾಡಿಕೆ. ಹೆಚ್ಚಾಗಿ ಸಂಪ್ರದಾಯಸ್ಥರು ಇಂದಿಗೂ ಒದ್ದೆ ಬಟ್ಟೆಯಲ್ಲೇ ಮನೆಯಲ್ಲೇ ನಾಗಪ್ಪನಿಗೆ ಅಭಿಷೇಕ ಮಾಡುವುದು ಶ್ರೇಯಸ್ಕರವೆಂದು ಭಾವಿಸಿದ್ದಾರೆ. ಹಸಿ ಹಾಲಿನಲ್ಲಿ ತನಿ ಎರೆಯುವುದು ಕಡ್ಡಾಯ. ತನಿ ಎರೆದ ನಂತರ ಕ್ರಮವಾಗಿ ಷೋಡಶೋಪಚಾರ ಪೂಜೆಯನ್ನು ಮಾಡುವ ಸಂಪ್ರದಾಯವೂ ಉಂಟು. ಆ ದಿನ ಬ್ರಹ್ಮಚಾರಿಗಳನ್ನು ಆಹ್ವಾನಿಸಿ ಎಲೆ ಅಡಿಕೆ, ವಸ್ತ್ರವನ್ನು ಕೊಡುವುದೂ ಕೆಲವರಲ್ಲಿ ಸಂಪ್ರದಾಯವಾಗಿ ಬೆಳೆದುಬಂದಿದೆ.

ವಿವಾಹಿತರು ಆ ದಿನ ಬ್ರಹ್ಮಚರ್ಯವನ್ನು ಪಾಲಿಸಬೇಕೆಂದು ಅಘೋಷಿತ ನಿಯಮವೂ ಜಾರಿಯಲ್ಲಿದೆ. ಹೆಣ್ಣುಮಕ್ಕಳು ಸಹೋದರರನ್ನು ತಮ್ಮ ಮನೆಗೆ ಆಹ್ವಾನಿಸಿ, ಅವರ ಹೊಟ್ಟೆ, ಬೆನ್ನು ತಣ್ಣಗಿರಲೆಂದು ಹಾರೈಸಿ ಹಾಲು, ತುಪ್ಪ ಸವರುತ್ತಾರೆ. ಈ ದಿನ ಕೆಲವು ನಿಬಂಧನೆಗಳನ್ನು ಎಲ್ಲರೂ ಶ್ರದ್ಧಾಭಕ್ತಿಯಿಂದ ಪಾಲಿಸುತ್ತಾರೆ. ಮೊದಲನೆಯದಾಗಿ ತನಿ ಎರೆದವರು ರಾತ್ರಿ ಅನ್ನವನ್ನು ಸೇವಿಸುವುದಿಲ್ಲ. ಸಾತ್ವಿಕ ಆಹಾರವನ್ನಷ್ಟೇ ಸೇವಿಸುವರು. ಕಾವಲಿಯನ್ನು ಕಾಸುವುದರಿಂದ ಒಡಹುಟ್ಟಿದವರಿಗೆ ಶ್ರೇಯಸ್ಸಲ್ಲವೆಂದು ನಂಬಿಕೆ ಎಲ್ಲರನ್ನೂ ಬಂದಿರುವುದರಿಂದ, ದೋಸೆ, ಚಪಾತಿ ಮುಂತಾದ ತಿಂಡಿಯನ್ನು ಮಾಡುವುದಿಲ್ಲ.

ದೇವರಿಗೆ ಈ ದಿನದ ನೈವೇದ್ಯಕ್ಕೆ ಕಡಲೇಬೇಳೆ, ಪಾಯಸ, ಆಂಬೊಡೆ, ಕೊಳಕಟ್ಟೆಗಳನ್ನು ಮಾಡುವುದು ವಿಶೇಷ. ಪಡವಲಕಾಯಿ, ಶ್ಯಾವಿಗೆಯನ್ನು ಈ ದಿನ ಉಪಯೋಗಿಸುವುದಿಲ್ಲ.

# ಆಧ್ಯಾತ್ಮ ಗಣಿತ ಚಮತ್ಕಾರ; 24 ವಿಷ್ಣು ನಾಮಗಳ ರಹಸ್ಯ

ವಿಷ್ಣುವಿಗೆ ಸಾವಿರ ಹೆಸರುಗಳಿವೆ. ವಿಶೇಷಗಳು, ಸಂಕೇತನಾಮಗಳು, ಪೌರಾಣಿಕ ಆಖ್ಯಾನಗಳ ಹಿನ್ನೆಲೆಯ ಇನ್ನಷ್ಟು, ಮತ್ತಷ್ಟು ಹೆಸರುಗಳು, ವೈವಿಧ್ಯಮಯ ಆಶಯಾರ್ಥದ, ಧಾರ್ಮಿಕ, ಆಧ್ಯಾತ್ಮಿಕ ದೃಷ್ಟಿಕೋನದ, ಆಗಮೋಕ್ತ ಅರ್ಚನೆಯ ಉದ್ದೇಶದ, ಶಿಲ್ಪಶಾಸ್ತ್ರೀಯ ಪ್ರಾಮುಖ್ಯತೆಯ ಹೆಸರುಗಳೂ ಇವೆ. ಇವೆಲ್ಲದರ ಪೈಕಿ ನಿರ್ದಿಷ್ಟವಾದ 24 ಹೆಸರುಗಳನ್ನಷ್ಟೇ ಪ್ರತ್ಯೇಕವಾಗಿ ಬಳಸಿಕೊಳ್ಳಲಾಗುತ್ತಿದೆ. ಈ 24 ಹೆಸರುಗಳಲ್ಲಿ ಎರಡು ವಿಭಾಗಗಳಿದ್ದು, ಎರಡನ್ನು ನಿತ್ಯಾನುಷ್ಠಾನದಲ್ಲಿ ಬಳಸಿಕೊಳ್ಳುತ್ತಲೇ ಮೊದಲನೆಯ ಗುಂಪಿಗೆ ಎಲ್ಲಿಲ್ಲದ ಆದ್ಯತೆಯನ್ನು ನೀಡಿದ್ದಾರೆ. ನಮ್ಮ ವೈಷ್ಣವ ಆರಾಧಕರು. ಕೀರ್ತನಕಾರರೂ ಕೂಡ ಈ ಚತುರ್ವಿಂಶತಿ ನಾಮಗಳನ್ನು ಬಳಸಿಕೊಳ್ಳುವ ಕ್ರಮ ಅನೂಚಾನವಾಗಿ ಮುಂದುವರಿದುಕೊಂಡು ಬಂದಿದೆ.

ಇವೆಲ್ಲದರ ಹಿಂದೆ ಒಂದು ಅದ್ಭುತ ಗಣಿತ ಸೂತ್ರವಿದೆ. ಇದರ ಸ್ವಾರಸ್ಯ ಏನು? ವಿವಿಧ ದೇವಾಲಯಗಳಲ್ಲಿ ವಿಷ್ಣು ವಿಗ್ರಹಗಳ ಹಿಂದಿನ ಶಿಲ್ಪ ಶಾಸ್ತ್ರೀಯ ಶ್ರದ್ಧೆಯು ಗಣಿತ ಸೂತ್ರವನ್ನು ಹೇಗೆ ಬಳಸಿಕೊಂಡಿದೆ? ಇವೆಲ್ಲದರ ತಲಸ್ಪರ್ಶಿ ಅವಲೋಕನವೇ ಈ ಲೇಖನ.

ಭಾರತೀಯ ಆಧ್ಯಾತ್ಮದಲ್ಲಿ ಮೂಲತಃ ನಿರಾಕಾರ ಏಕದೇವತಾ ಪ್ರತಿಪಾದನೆಯಿದೆ. ಆದರೆ ಕ್ರಮೇಣ ನಾನಾ ಕಾರಣಗಳಿಂದ ದೇವತೆಗಳ ಮೂರ್ತಿ ರೂಪಗಳ ಬಳಕೆಯು ಜನಪ್ರಿಯವಾಗುತ್ತಾ ಬಂತು. "ಸರ್ವಾಕಾರಂ ನಿರಾಕಾರಂ" ಎಂಬ ಪ್ರಶಸ್ತಿಯ ಮರೆಯಲ್ಲಿ ಅನೇಕ ದೇವತಾ ವೈವಿಧ್ಯಗಳು ರೂಪುಗೊಂಡವು. ಪ್ರತಿ ದೇವತೆಗೂ ನಾನಾ ಹೆಸರುಗಳಾದವು. ವಿವಿಧ ದೇವೀ ದೇವತಾ ಅರ್ಚನೆಗೆ ಅಷ್ಟೋತ್ತರಶತ (ನೂರೆಂಟು), ಅಷ್ಟೋತ್ತರ ಸಹಸ್ರ (ಸಾವಿರದೆಂಟು) ನಾಮಗಳು ಹುಟ್ಟಿದವು. ಹೀಗೆ ಶಿವ, ವಿಷ್ಣು, ವಿವಿಧ ದೇವಿಯರು ಮುಂತಾದವರಿಗೆ ಒಬ್ಬೊಬ್ಬರಿಗೂ ಸಾವಿರಾರು ಹೆಸರುಗಳು! ಮಹಾಭಾರತದಷ್ಟು ಪುರಾತನ ಕಾವ್ಯದಲ್ಲೇ ಶಿವಸಹಸ್ರನಾಮ, ವಿಷ್ಣು ಸಹಸ್ರನಾಮ ಮುಂತಾದವು ದಾಖಲಾಗಿವೆ.

ವಿಷ್ಣುವಿನ ಸಾವಿರ ನಾಮಗಳ ಛಂದೋಬದ್ಧ ಸರಣಿಯು ವಿಷ್ಣುಸಹಸ್ರನಾಮ ಎಂದು ಜನಪ್ರಿಯವಾಗಿ ಆರಾಧನೀಯವಾಗಿದೆ. ಈ ಸಾವಿರ ಹೆಸರುಗಳ ಸರಣಿಯಲ್ಲಿ ವಿಷ್ಣುವಿನ 24 ಹೆಸರುಗಳ (ವಿಷ್ಣು ಚತುರ್ವಿಂಶತಿ ನಾಮಾವಳಿ) ಒಂದು ಸರಣಿಯೂ ಉಂಟು. ವಿಷ್ಣು ಸಹಸ್ರನಾಮದಲ್ಲಿ ಈ ಎಲ್ಲಾ ಹೆಸರುಗಳೂ ಇವೆ. ಅಮರಕೋಶದಲ್ಲೂ ಈ ಪೈಕಿ ಕೆಲವು ಹೆಸರುಗಳಿವೆ. ಈ ನಾಮಾವಳಿಯು ಬಾಹ್ಯ ಮತ್ತು ಅಂತರಂಗಗಳ ಶುದ್ಧೀಕಾರಕವಾಗಿದೆ ಎಂಬ ನಂಬಿಕೆ ಆಸ್ತಿಕರಲ್ಲಿದೆ. ಸ್ಮಾರ್ತ, ಮಾಧ್ವ, ಶ್ರೀವೈಷ್ಣವ, ವೈಕಾನಸ ಮುಂತಾದ ಧರ್ಮ ಪಂಥಗಳಲ್ಲಿ ವಿಷ್ಣುವಿನ 24 ಹೆಸರುಗಳನ್ನು ಬಳಸುವ ಕ್ರಮವಿದೆ. ಪಂಥ ಲಾಂಛನಗಳಾದ ದ್ವಾದಶ ಮುದ್ರೆಗಳು– ದ್ವಾದಶ ಊರ್ಧ್ವ ಪುಂಡ್ರಗಳು ಮುಂತಾದವುಗಳ ಧಾರಣೆ, ಶುದ್ಧ ಪುಣ್ಯಾಹದಂತಹ ಶುದ್ಧೀಕರಣ ಕಾರ್ಯಗಳಲ್ಲಿ, ಆಪೋಶನ ಎಂಬ ಅಂತರಂಗ ಶುದ್ಧೀಕರಣದಲ್ಲಿ, ಕಲಶಗಳ ಸ್ಥಾಪನೆ, ದೇವತಾರ್ಚನೆ, ಶ್ರಾದ್ಧ ಮುಂತಾದ ಅನೇಕ ಧಾರ್ಮಿಕ ಕಾರ್ಯಗಳಲ್ಲಿ ಇವನ್ನು ಬಳಸಲಾಗುತ್ತದೆ.

ವಿಷ್ಣು ಚತುರ್ವಿಂಶತಿ ಎಂಬ ಈ ಸರಣಿಯಲ್ಲಿ ಕ್ರಮವಾಗಿ ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷಿಕೇಶ, ಪದ್ಮನಾಭ, ದಾಮೋದರ, ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಪುರುಷೋತ್ತಮ, ಅಧೋಕ್ಷಜ, ನಾರಸಿಂಹ, ಅಚ್ಯುತ, ಜನಾರ್ಧನ, ಉಪೇಂದ್ರ, ಹರಿ, ಕೃಷ್ಣ ಈ 24 ಹೆಸರುಗಳು ನಿರ್ದಿಷ್ಟವಾಗಿವೆ. ಇದರಲ್ಲಿ 1 ರಿಂದ 12ರವರೆಗೆ ಅಂದರೆ ಕೇಶವನಿಂದ ದಾಮೋದರನ ತನಕದ ಕೇಶವಾದಿ ದ್ವಾದಶ ಹಾಗೂ ಸಂಕರ್ಷಣದಿಂದ ಕೃಷ್ಣನ ತನಕ ಸಂಕರ್ಷಾದಿ ದ್ವಾದಶ ಎಂಬ ಎರಡು ವಿಭಾಗಗಳಿವೆ. ಧಾರ್ಮಿಕವಾಗಿ ಇವುಗಳ ಬಳಕೆ ಅನಿವಾರ್ಯವೆನಿಸಿದ್ದು, ಇದರಲ್ಲಿ 24 ಹೆಸರುಗಳನ್ನು ಪೂರ್ಣವಾಗಿ ಬಳಸುವುದು, ಮೊದಲ ವಿಭಾಗವನ್ನು ಮಾತ್ರವೇ ಬಳಸುವುದು ಅಥವಾ ಕ್ವಚಿತ್ತಾಗಿ ಕೆಲವೊಮ್ಮೆ ಎರಡನೇ ವಿಭಾಗವನ್ನು ಮಾತ್ರವೇ ಬಳಸುವುದು ಮುಂತಾದ ಕ್ರಮಭೇದಗಳೂ ಉಂಟು!

ಇವುಗಳನ್ನು ಗಮನಿಸಿದಾಗ ವಿಷ್ಣುವಿಗೆ ಸಾವಿರ ಹೆಸರುಗಳಿದ್ದರೂ ಹೀಗೆ ನಿರ್ದಿಷ್ಟ 24 ಹೆಸರುಗಳನ್ನು ಮಾತ್ರವೇ ಪ್ರತ್ಯೇಕವಾಗಿ ಬಳಸುವುದೇಕೆ? ಅದರಲ್ಲಿ ಎರಡು ಗುಂಪುಗಳೇಕೆ? ಮೊದಲ ಗುಂಪಿಗೆ ಏಕೆ ಹೆಚ್ಚು ಆದ್ಯತೆ? ಮುಂತಾದ ಪ್ರಶ್ನೆಗಳು ಮೇಲುನೋಟಕ್ಕೆ ಸಾಧಾರಣವಾಗಿ ಅರ್ಥಹೀನವಾಗಿಯೇ ಕಾಣಬಹುದು. ಆದರೆ ಅವುಗಳಿಗೆ ಸಿಗುವ ಉತ್ತರವು ಕುತೂಹಲಕರವೂ, ಬೋಧನಾತ್ಮಕವೂ ಆಗಿರುತ್ತದೆ.

ಈ ಅಂಶಗಳನ್ನು ವಿಶ್ಲೇಷಿಸುತ್ತಾ ಹೋದರೆ ಆಶ್ಚರ್ಯವೂ ಆಗುತ್ತದೆ.

ಈ ಕುತೂಹಲಕಾರೀ ಸರಣಿಯ ಮೊದಲ ಹಂತವಾಗಿ ವಿಷ್ಣು ಚತುರ್ವಿಂಶತಿ ಎಂದರೆ ಏನು? ಎಂದು ತಿಳಿಯಬೇಕಾಗುತ್ತದೆ.

ಬಹು ಜನಪ್ರಿಯವೂ, ಬಹುಶ್ರುತವೂ ಆಗಿರುವ ವಿಷ್ಣು ಚತುರ್ವಿಂಶತಿಯ 24 ಹೆಸರುಗಳಿಗೆ ವಿಷ್ಣುವಿನ 24 ಮೂರ್ತಿರೂಪಗಳನ್ನು ನಿಗದಿಪಡಿಸಲಾಗಿದೆ. ಈ ಮೂರ್ತಿಗಳ ದೇಹಾಕಾರದಲ್ಲಿ ಯಾವ ವ್ಯತ್ಯಾಸವೂ ಇಲ್ಲ ಎಂಬುದು ಗಮನಾರ್ಹ. ನೋಡಲು ಒಂದೇ ದೇಹಾಕಾರದ ಮೂರ್ತಿಗಳು! ಎಲ್ಲ ಮೂರ್ತಿಗಳಿಗೂ ನಾಲ್ಕು ಕೈಗಳು, ಆ ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮ ಎಂಬ ನಾಲ್ಕು ವಸ್ತುಗಳು. ಹಾಗಿದ್ದರೆ ಅವುಗಳಲ್ಲಿ ಪರಸ್ಪರ ವ್ಯತ್ಯಾಸವಾದರೂ ಏನು? ಇದೇ ಇಲ್ಲಿನ ಕುತೂಹಲದ ಮೂಲವಸ್ತು.

ಹೀಗೊಂದು ಅದ್ಭುತ ಗಣಿತಸೂತ್ರ: ನಮಗೆಲ್ಲ ಆಧುನಿಕ ಗಣಿತಶಾಸ್ತ್ರದ ಪರ್ಮುಟೇಷನ್ ಅಂಡ್ ಕಾಂಬಿನೇಷನ್ ಎಂಬ ಸೂತ್ರವೊಂದು ಸಾಕಷ್ಟು ಪರಿಚಿತವಷ್ಟೆ. ಪರ್ಮುಟೇಷನ್ ಎಂದರೆ ಸ್ಥಾನ ಬದಲಿಕೆ. ಕಾಂಬಿನೇಷನ್ ಎಂದರೆ ಸಂಯೋಜನೆ. ಈ ಸೂತ್ರದ ಒಟ್ಟಾರೆ ಆಶಯ ವಸ್ತುಗಳನ್ನು ಪರಸ್ಪರ ಸ್ಥಳಾಂತರಗೊಳಿಸಿ ಇಡುತ್ತಾ ಹೋದರೆ ಎಷ್ಟೆಷ್ಟು ವಸ್ತುಗಳಿಂದ ಎಷ್ಟೆಷ್ಟು ಸಂಯೋಜನಾ ವಿನ್ಯಾಸಗಳನ್ನು ರೂಪಿಸಬಹುದು ಎಂಬುದನ್ನು ವಿವರಿಸಲು ಈ ಸೂತ್ರವನ್ನು ಆಧುನಿಕ ಗಣಿತ ವಿಜ್ಞಾನವು ಬಳಸುತ್ತದೆ.

ಈ ಆಧುನಿಕ ಗಣಿತ ಸೂತ್ರಕ್ಕೂ ಪುರಾತನ ಭಾರತೀಯ ವಿಷ್ಣು ಚತುರ್ವಿಂಶತಿ ಕ್ರಮಕ್ಕೂ ಏನು ಸಂಬಂಧ? ಎಂಬ ಪ್ರಶ್ನೆ ಈಗ ಏಳುತ್ತದಲ್ಲವೆ! ಅಲ್ಲೇ ಇರುವುದು ಕುತೂಹಲದ ಪ್ರಧಾನ ಘಟ್ಟ!

ವಿಷ್ಣು ಚತುರ್ವಿಂಶತಿಯ 24 ಮೂರ್ತಿಗಳಲ್ಲಿ ಪ್ರತಿಯೊಂದಕ್ಕೂ ನಾಲ್ಕು ಕೈಗಳು ಮತ್ತು ಅವುಗಳಲ್ಲಿ ಶಂಖ, ಚಕ್ರ, ಗದಾ, ಪದ್ಮ ಎಂಬ ನಾಲ್ಕು ವಸ್ತುಗಳು ಅಂದರೆ ನಾಲ್ಕು ಸ್ಥಾನಗಳು ಹಾಗೂ ನಾಲ್ಕು ವಸ್ತುಗಳು ಇಲ್ಲಿವೆ. ಈ ನಾಲ್ಕು ವಸ್ತುಗಳನ್ನು ನಾಲ್ಕು ಕೈಗಳಲ್ಲಿ ಪರಸ್ಪರ ಸ್ಥಾನ ಬದಲಿಸುತ್ತಾ, ಇಡುತ್ತಾ ಹೋದರೆ ಎಷ್ಟು ಬಗೆಗಳಲ್ಲಿ ಸಂಯೋಜಿಸಬಹುದು? ಇದು ಈ ಗಣಿತ ಕುತೂಹಲದ ಮುಂದಿನ ಹಂತ.

ಇದು ಆಧುನಿಕ ಗಣಿತಶಾಸ್ತ್ರದ ಪ್ರಭಾವದಿಂದ ಹುಟ್ಟಿದ ಪ್ರಶ್ನೆಯೇ ಅಥವಾ ಭಾರತೀಯರು ಅದಕ್ಕೂ ಮೊದಲಿನಿಂದಲೇ ಈ ಗಣಿತ ರಹಸ್ಯವನ್ನು ಅರಿತಿದ್ದರೋ? ಎಂಬ ಪ್ರಶ್ನೆಯನ್ನು ಹಾಕಿಕೊಳ್ಳೋಣ.

ಭಾಸ್ಕರಾಚಾರ್ಯರ ಲೀಲಾವತಿ ಗಣಿತ ಎಂಬ ಕೃತಿ ಜಗತ್ತಿನ ಮೊತ್ತಮೊದಲ ಬೀಜಗಣಿತ ಗ್ರಂಥ. ಇದು 12ನೇ ಶತಮಾನದ ಪೂರ್ವಾರ್ಧದಲ್ಲೇ ರಚಿತವಾಗಿರುವ ಗಣಿತಗ್ರಂಥ. ಪ್ರಶ್ನೋತ್ತರ ರೂಪದಲ್ಲಿರುವ ಈ ಗ್ರಂಥದಲ್ಲಿ ಗಣಿತದ ಅನೇಕ ಸಮಸ್ಯೆಗಳನ್ನು ಪ್ರಸ್ತಾಪಿಸಿ, ಅದಕ್ಕೆ ಉತ್ತರವನ್ನು ನೀಡಲಾಗಿದೆ. ಈ ಪೈಕಿ ಒಂದು ಪ್ರಶ್ನೆ:

ಪಾಶಾಂಕುಶಾಹಿ ಡಮರೂ ಕಪಾಲ ಶೂಲೈಃ।
ಖಟ್ವಾಂಗ ಶುಕ್ತಿ ಕರಚಾಪಯುತೈ ರ್ಭವಂತಿ ॥
ಅನ್ಯೋನ್ಯಹಸ್ತ ಕಲಿತೈಃಕತಿ ಮೂರ್ತಿಭೇದಾಃ।
ಶಂಭೋರ್ಹರೇರಿವ ಸರೋಜ ಗದಾರಿ ಶಂಖೈಃ॥

ಶಂಭುವು (ಶಿವನು) ಪಾಶ, ಅಂಕುಶ, ಸರ್ಪ, ಡಮರು, ಕಪಾಲ, ಶೂಲ, ಖಟ್ವಾಂಗ, ಶುಕ್ತಿ, ಬಾಣ, ಬಿಲ್ಲು ಎಂಬ ಹತ್ತು ವಸ್ತುಗಳನ್ನು ಹರಿಯು (ವಿಷ್ಣು) ಪದ್ಮ, ಗದೆ, ಚಕ್ರ, ಶಂಖ, ಎಂಬ ನಾಲ್ಕು ವಸ್ತುಗಳನ್ನು ಹೊಂದಿದ್ದಾರೆ. ಶಿವನ ಕೈಗಳ ಹತ್ತು ವಸ್ತುಗಳನ್ನು ಅವನ ಹತ್ತು ಕೈಗಳಲ್ಲಾಗಲಿ, ವಿಷ್ಣುವಿನ ಕೈಗಳಲ್ಲಿರುವ ನಾಲ್ಕು ವಸ್ತುಗಳನ್ನು ಅವನ ನಾಲ್ಕು ಕೈಗಳಲ್ಲಾಗಲಿ, ಪರಸ್ಪರ ಸ್ಥಾನ ಬದಲಿಸಿ ಇಡುತ್ತಾ ಹೋದರೆ ಶಿವ ಮತ್ತು ವಿಷ್ಣುವಿನ ಎಷ್ಟೆಷ್ಟು ಬಗೆಯ ಮೂರ್ತಿ ವಿನ್ಯಾಸಗಳನ್ನು ಸಾಧಿಸಬಹುದು? ಎಂಬುದು ಈ ಪ್ರಶ್ನೆ ಅರ್ಥ.

ಇಲ್ಲಿ 'ಅನ್ಯೋನ್ಯ' ಎಂಬ ಪದದಲ್ಲಿ ಸ್ಥಾನಾಂತರ (ಪರ್ಮುಟೇಷನ್) 'ಕಲಿತೈಃ' ಎಂಬ ಪದದಲ್ಲಿ ಸಂಯೋಜನೆ (ಕಾಂಬಿನೇಷನ್) ಹಾಗೂ 'ಹಸ್ತ' ಎಂಬುದರಲ್ಲಿ ಸ್ಥಾನಗಳ ಸಂಖ್ಯೆ ಹಾಗೂ ವಸ್ತುಗಳ ಸಂಖ್ಯೆ ಇವು ಸಂಕೇತಗೊಂಡಿವೆ ಎಂಬುದನ್ನು ಪುರಾತನ ಭಾರತೀಯರು ಸಾವಿರಾರು ವರ್ಷಗಳ ಹಿಂದೆಯೇ ಗಮನಿಸಿದ್ದರು. ಹಾಗು ನಿತ್ಯ ಜೀವನದಲ್ಲಿ ಬಳಕೆಗೆ ತೆಗೆದುಕೊಂಡಿದ್ದರು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಈಗ ಈ ಗಣಿತ ಪ್ರಶ್ನೆಗೆ ಉತ್ತರವೇನು? ನೋಡೋಣ. ಆಧುನಿಕ ಗಣಿತಶಾಸ್ತ್ರದ ಪರ್ಮುಟೇಷನ್ ಅಂಡ್ ಕಾಂಬಿನೇಷನ್ ಸೂತ್ರವು ನಿರ್ದಿಷ್ಟ ಸಂಖ್ಯೆಯ ವಸ್ತುಗಳ ಸ್ಥಾನಾಂತರಿಕ ಸಂಯೋಜನಾ ವಿನ್ಯಾಸಗಳ ಮೊತ್ತವನ್ನು ಸುಲಭವಾಗಿ ಕಂಡುಹಿಡಿಯಲು, ಆ ವಸ್ತುಗಳ ನಿರ್ದಿಷ್ಟ ಸಂಖ್ಯೆಯನ್ನು ಅದರ ಹಿಂದಿನ 1ರವರೆಗಿನ ಅಂಕಿಗಳಿಂದ ಗುಣಿಸುತ್ತಾ ಹೋಗಬೇಕು ಎಂದು ಹೇಳುತ್ತದೆ.

**(ಮುಂದುವರೆಯುವುದು)** **– ಎ. ವಿಜಯಲಕ್ಷ್ಮಿ**

# ಪಲಾವ್ ಸ್ಪೆಷಲ್

ಪಲಾವ್ ಎಂದಾಕ್ಷಣ ಎಲ್ಲರೂ ಮಾಡುವುದು ಮಿಕ್ಸೆಡ್ ತರಕಾರಿಯ ಪಲಾವನ್ನೆ. ನಿಮ್ಮಲ್ಲಿ ಅಡುಗೆ ಮಾಡುವ ಉತ್ಸಾಹ, ಪ್ರಯೋಗಶೀಲತೆ ಇದ್ದಲ್ಲಿ ಹಲವು ಬಗೆಯ ರುಚಿಕರ ಪಲಾವ್ ಮಾಡಬಹುದು. ಇಲ್ಲಿವೆ ಕೆಲವು ಸ್ಪೆಷಲ್ ಪಲಾವ್ ರೆಸಿಪಿ..

**ಸ್ವೀಟ್ಸ್ ಕಾರ್ನ್ ಪಲಾವ್:** ಏನೇನು ಬೇಕು? ಬಾಸುಮತಿ ಅಕ್ಕಿ ಎರಡು ಕಪ್, ಸ್ವೀಟ್ ಕಾರ್ನ್ ಒಂದು ಕಪ್, ಹಾಲು ಅರ್ಧ ಕಪ್, ನೀರು ನಾಲ್ಕು ಕಪ್, ಪುದಿನಾ, ಕೊತ್ತಂಬರಿ ಸೊಪ್ಪು ಅರ್ಧ ಕಪ್, ತುಪ್ಪ ಮತ್ತು ಎಣ್ಣೆ ಮೂರು ಚಮಚ, ಬೆಳ್ಳುಳ್ಳಿ ಆರು ಎಸಳು, ಶುಂಠಿ ಅರ್ಧ ಇಂಚು ಕಾಳು ಮೆಣಸು ಹತ್ತು, ಲವಂಗ ನಾಲ್ಕು, ಚಕ್ಕೆ ಒಂದು ಇಂಚು, ಗೊಡಂಬಿ ಏಳು, ಏಲಕ್ಕಿ ಮೂರು, ಪಲಾವ್ ಎಲೆ ಒಂದು, ಉಪ್ಪು ರುಚಿಗೆ ತಕ್ಕಷ್ಟು.

**ಮಾಡೋದು ಹೇಗೆ?:** ಅಕ್ಕಿಯನ್ನು ಇಪ್ಪತ್ತು ನಿಮಿಷ ನೀರಿನಲ್ಲಿ ನೆನೆಸಿಕೊಳ್ಳಿ. ಬೆಳ್ಳುಳ್ಳಿ, ಶುಂಠಿ, ಕಾಳು ಮೆಣಸು, ಲವಂಗ, ಚಕ್ಕೆ, ಗೋಡಂಬಿ, ಸ್ವಲ್ಪ ಪುದೀನಾ ಎಲೆಗಳನ್ನು ನುಣ್ಣಗೆ ಮಿಕ್ಸಿ ಮಾಡಿಕೊಳ್ಳಿ. ಕುಕ್ಕರ್ ಬಿಸಿ ಮಾಡಿ ಅದಕ್ಕೆ ತುಪ್ಪ ಮತ್ತು ಎಣ್ಣೆಯನ್ನು ಹಾಕಜಿ ಬಿಸಿ ಆದ ಮೇಲೆ ಏಲಕ್ಕಿ, ಪಲಾವ್ ಎಲೆ, ಸೀಳಿದ ಹಸಿ ಮೆಣಸು ಹಾಕಿ ಎರಡು ನಿಮಿಷ ಹುರಿಯಿರಿ. ಮಿಕ್ಸಿ ಮಾಡಿದ ಪೇಸ್ಟ್ ಹಾಕಿ ಹಸಿ ವಾಸನೆ ಹೋಗುವವರೆಗೆ ಹುರಿದು ಇದಕ್ಕೆ ಸ್ವೀಟ್ ಕಾರ್ನ್ ಸೇರಿಸಿ ಮತ್ತೇ ಎರಡು ನಿಮಿಷ ಮಂದ ಉರಿಯಲ್ಲಿ ಹುರಿಯಿರಿ. ಸ್ವಲ್ಪ ಉಪ್ಪು, ನೀರು, ಹಾಲು ಹಾಕಿ ಕುದಿಸಿ, ನಂತರ ಪುದಿನಾ, ಕೊತ್ತಂಬರಿ ಸೊಪ್ಪು, ಅಕ್ಕಿಗಳನ್ನು ಸೇರಿಸಿ ಕುಕ್ಕರ್ ಮುಚ್ಚಿ ಎರಡು ವಿಷಲ್ ಹೊಡೆಸಿ ಉಗಿ ಇಳಿದ ಮೇಲೆ ತೆಗೆದು ಬಿಸಿಯಾಗಿ ಸರ್ವ್ ಮಾಡಿ.

**ಹೂಕೋಸಿನ ಪಲಾವ್ ಏನೇನು ಬೇಕು?:** ಸೋನಾಮಸೂರಿ ಅಕ್ಕಿ ಎರಡು ಕಪ್, ಹೂಕೋಸು ಒಂದು ಸಣ್ಣದು, ಬೆಳ್ಳುಳ್ಳಿ ಎಂಟು ಎಸಳು, ಶುಂಠಿ ಅರ್ಧ ಇಂಚು, ಹಸಿಮೆಣಸು ಎರಡು, ಈರುಳ್ಳಿ ಮೂರು, ಟೊಮ್ಯಾಟೋ ಎರಡು, ಕೊತ್ತಂಬರಿ ಸೊಪ್ಪು ಅರ್ಧ ಕಟ್ಟು, ಟೊಮ್ಯಾಟೋ ಸಾಸ್ ಎರಡು ಚಮಚ, ಗರಂ ಮಸಾಲ ಮೂರು ಚಮಚ ಎಣ್ಣೆ ಮೂರು ಟೇಬಲ್ ಚಮಚ ಉಪ್ಪು ರುಚಿಗೆ ತಕ್ಕಷ್ಟು, ನೀರು ನಾಲ್ಕು ಕಪ್.

**ಮಾಡೋದು ಹೇಗೆ?:** ಹೂಕೋಸು ಸೋಸಿ, ಉಪ್ಪು ನೀರಿನಲ್ಲಿ ಹಾಕಿಡಿ. ಈರುಳ್ಳಿ ಉದ್ದಕ್ಕೆ ಹೆಚ್ಚಿಕೊಳ್ಳಿ. ಬೆಳ್ಳುಳ್ಳಿ, ಶುಂಠಿ, ಹಸಿಮೆಣಸು, ಟೊಮ್ಯಾಟೋ, ಕೊತ್ತಂಬರಿ ಸೊಪ್ಪು, ಸ್ವಲ್ಪ ಈರುಳ್ಳಿ ಹಾಕಿ ನುಣ್ಣಗೆ ಮಿಕ್ಸಿ ಮಾಡಿಕೊಳ್ಳಿ. ಕುಕ್ಕರ್ ಬಿಸಿ ಮಾಡಿ ಎಣ್ಣೆ ಹಾಕಿ ಬಿಸಿ ಆದ ಮೇಲೆ ಉಳಿದ ಈರುಳ್ಳಿ ಹಾಕಿ ಕಂದು ಬಣ್ಣ ಬರುವವರೆಗೆ ಹುರಿಯಿರಿ. ಇದಕ್ಕೆ ಮಿಕ್ಸಿ ಮಾಡಿದ ಮಿಶ್ರಣ ಹಾಕಿ ಎರಡು ನಿಮಿಷ ಹುರಿದು ಗರಂ ಮಸಾಲೆ, ಟೊಮ್ಯಾಟೋ ಸಾಸ್ ಹಾಕಿ ಸ್ವಲ್ಪ ಹುರಿಯಿರಿ. ನಂತರ ಹೂಕೋಸು, ಅಕ್ಕಿ, ಉಪ್ಪು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ ಕುಕ್ಕರ್ ಮುಚ್ಚಿ ವಿಷಲ್ ಹೊಡೆಸಿ, ಆಮೇಲೆ ತೆಗೆದು ಬಿಸಿಯಾಗಿ ಸರ್ವ್ ಮಾಡಿ.

## ಕಾಸಿಯ ಕೌನ್ಸಿಲ್ ನೂತನ ಸದಸ್ಯರುಗಳಿಗೆ ಶುಭಾಶಯಗಳು




ಕಳೆದ ತಿಂಗಳು ನಡೆದ ಕಾಸಿಯಾ ಸಂಸ್ಥೆ ಚುನಾವಣೆ ನಡೆದಿದ್ದು ಶ್ರೀ ಬಸವರಾಜು ಜವಾಲಿ ಅಧ್ಯಕ್ಷರಾಗಿ, ಶ್ರೀ ಆರ್. ರಾಜು ಉಪಾಧ್ಯಕ್ಷರಾಗಿ, ಶ್ರೀ ರವಿಕಿರಣ್ ಕುಲಕರ್ಣಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಮೈಸೂರಿನ ಶ್ರೀ ಅನ್ನಪೂರ್ಣ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲೀಕರು ಹಾಗೂ ಮಹಿಳಾ ವಿಶೇಷ ಪತ್ರಿಕೆಯ ಮುದ್ರಕರಾದ ಶ್ರೀಮತಿ ಬಿ.ಸಿ. ಮೀರಾರವರು ಸಹ ಕಾಸಿಯಾ ಕೌನ್ಸಿಲ್‌ನ ಸದಸ್ಯರಾಗಿ ಚುನಾವಣೆಯಲ್ಲಿ ಆಯ್ಕೆಯಾಗಿರುತ್ತಾರೆ. ನೂತನ ಪದಾಧಿಕಾರಿಗಳಿಂದ ಉತ್ತಮ ಕಾರ್ಯಗಳು ಮೂಡಿಬರಲಿ ಎಂದು ಶುಭವನ್ನು ಕೋರಿದೆ.

# ಜೀವಕ್ಕೆ ಆಯಸ್ಸು ತುಂಬುವುದಕ್ಕಿಂತ ಆಯಸ್ಸಿಗೆ ಜೀವ ತುಂಬೋಣ; ಹಿರಿಯ ಜೀವ ನಮಗೆ ಹೊರೆಯಲ್ಲ.

ಆಯಸ್ಸಿಗೆ ಜೀವ ತುಂಬೋಣ ಎಂಬ ಮಾತು ಸುಮಾರು 30 ವರ್ಷಗಳ ಹಿಂದೆಯೇ ವಿಶ್ವ ಆರೋಗ್ಯ ಸಂಸ್ಥೆ ಘೋಷಿಸಿತ್ತು. ಎಂತಹ ಚೇತೋಹಾರಿ ವಾಕ್ಯವಲ್ಲವೆ? ಈ ಮಾತು ಇವತ್ತಿಗೂ ಪ್ರಸ್ತುತ. ಇತ್ತೀಚೆಗೆ ವೃದ್ಧಾಪ್ಯದ ಬಗ್ಗೆ, ಅವರ ಸಮಸ್ಯೆಗಳ ಬಗ್ಗೆ ಎಲ್ಲೆಲ್ಲೂ ಚಿಂತನೆ ನಡೆಯುತ್ತಿದೆ.

ಭಾರತದಲ್ಲಿ ಸುಮಾರು 10 ಕೋಟಿ ಜನ 60 ವರ್ಷಕ್ಕೂ ಮೇಲ್ಪಟ್ಟ ವಯೋಮಾನದವರಿದ್ದಾರೆ. 2050ರ ವೇಳೆಗೆ ಈ ಸಂಖ್ಯೆ ದುಪ್ಪಟ್ಟಿಗಿಂತ ಹೆಚ್ಚಾಗಿ ಏರಲಿದೆ. ಸದ್ಯಕ್ಕೆ ಯುವಜನರೇ ಹೆಚ್ಚಿರುವ ಭಾರತ 2050ರ ವೇಳೆಗೆ ಪ್ರಪಂಚದಲ್ಲೇ ಅತ್ಯಧಿಕ ವೃದ್ಧರನ್ನು ಹೊಂದುವ ಅಂದಾಜಿದೆ. ವೈದ್ಯಕೀಯ ರಂಗದ ಸುಧಾರಿತ ಕ್ರಮಗಳು, ಹೊಸ ಹೊಸ ಔಷಧಿಗಳ ಆವಿಷ್ಕಾರ, ಬದುಕುವ ವಯೋಮಾನವನ್ನೇನೋ ವಿಸ್ತರಿಸಿದೆ. (ಆದರೆ ಮುಪ್ಪಿನ ಸ್ವಾವಲಂಬಿ ಗುಣಮಟ್ಟ ವೇನೂ ಸುಧಾರಿಸಿಲ್ಲ ಅನ್ನುವುದು ಇನ್ನೊಂದು ಸತ್ಯ. ಅದರ ವಿಷಯಕ್ಕೆ ಆಮೇಲೆ ಬರೋಣ). ಹಾಗಾಗಿ ವೃದ್ಧರ ಅನುಪಾತ ಅತಿಯಾಗಿ ಏರುತ್ತಿದೆ. ಈ ವಿದ್ಯಮಾನ ಭಾರತಕ್ಕಷ್ಟೇ ಸೀಮಿತವಾಗಿಲ್ಲ. ಇಡೀ ವಿಶ್ವದ ಸಮಸ್ಯೆಯಾಗಿದೆ. ಜನಸಮೂಹದ ವಯೋಮಾನ ಸೂಚಿಯೇ ಏರುಪೇರಾಗುತ್ತಿದೆ. ಸಾಲದೆಂಬಂತೆ ಇನ್ನೊಂದು ಆತಂಕದ ವಿಷಯ: ಎಪ್ಪತ್ತೈದು (75) ವರ್ಷಕ್ಕಿಂತ ಹೆಚ್ಚಿನ ವಯೋಮಾನದವರ ಸಂಖ್ಯೆ ಇನ್ನೂ ವೇಗವಾಗಿ ಬೆಳೆಯುತ್ತಿದೆ.

ವ್ಯಾಧಿಗಳನ್ನು ನಿರ್ವಹಿಸಬಹುದಾದಂತಹ ವಯೋಮಾನ 60 ವರ್ಷದವರೆಗೂ ಇದ್ದರೆ, ಹೆಚ್ಚಿಗೆ ಶ್ರಮ ವಹಿಸಬೇಕಾಗುವ ವಯೋಮಾನ 75ರವರೆಗೂ ಎಂದು ಭಾವಿಸೋಣ. ಆದರೆ ವಯಸ್ಸು 75 ದಾಟಿದರೆ ಸಮಸ್ಯೆಗಳು ಮಹಾಪೂರ. ಇವತ್ತಿನ ಜೀವನಶೈಲಿ, ಪರಿಸರವೇ ಇದಕ್ಕೆ ಕಾರಣ. ಈ ಹಂತದಲ್ಲಿ ಯಾವುದೇ ಚಿಕಿತ್ಸೆಗೆ ಸ್ಪಂದಿಸುವ ಶಕ್ತಿ (ಪ್ರೊಗ್ನಾಸಿಸ್) ಅತೀ ಕಡಿಮೆ.

ಸಂಧಿವಾತ, ಕೀಲುನೋವು, ರಕ್ತದೊತ್ತಡ, ಮಧುಮೇಹ, ಉಸಿರಾಟದ ಸಮಸ್ಯೆ, ಹಲ್ಲು ಉದುರುವುದು, ಅಜೀರ್ಣತೆ, ಮಲಬದ್ಧತೆ, ದೃಷ್ಟಿಮಾಂದ್ಯ, ಕಿವುಡುತನ, ಹೃದಯಸಂಬಂಧಿ ಸಮಸ್ಯೆಗಳು, ಅಸಂಯಮ ಮೂತ್ರ, ನರಗಳ ದೌರ್ಬಲ್ಯ ಮುಂತಾದವು ಸಾಮಾನ್ಯವಾಗಿ ವೃದ್ಧರಿಗೆ ಬರುವ ಖಾಯಿಲೆಗಳು. ಒಂದೆರಡು ಖಾಯಿಲೆಗಳಿಂದ ಪ್ರಾರಂಭವಾಗಿ ಕ್ರಮೇಣ ಒಂದು ಇನ್ನೊಂದಕ್ಕೆ ಕಾರಣವಾಗುತ್ತ, ಕ್ಯಾಸ್ಕೇಡಿಂಗ್ ಎಫೆಕ್ಟ್ ಎಂದರೆ ಸರಣಿ ಸರಪಳಿಯಂತೆ ಹಲವು ವ್ಯಾಧಿಗಳಾಗಿ ಆವರಿಸಬಹುದು.

ಇವು ದೇಹಕ್ಕೆ ಸಂಬಂಧಿಸಿದರೆ, ಮಾನಸಿಕ ಹಂತದಲ್ಲಿಯೂ ಹಲವು ಸಂಕೀರ್ಣ ಸಮಸ್ಯೆಗಳು ಉದ್ಭವವಾಗಬಹುದು. ವ್ಯಕ್ತಿಯ ಪ್ರಜ್ಞೆ, ವ್ಯಕ್ತಿತ್ವವನ್ನೇ ನಾಶ ಮಾಡುವ ಖಿನ್ನತೆ, ಮರೆಗುಳಿತನ (ಆಲ್ಝೈಮರ್, ಡಿಮೆನ್ಷಿಯ), ನಿದ್ರಾಹೀನತೆ, ಪಾರ್ಕಿನ್‌ಸನ್ ಖಾಯಿಲೆ ಎಲ್ಲವೂ ದಾಳಿಯಿಡಬಹುದು. ವಯಸ್ಸು 80 ದಾಟಿದ ಮೇಲೆ ಇವುಗಳ ಹಾವಳಿ ಪ್ರತಿಶತ 50ಕ್ಕಿಂತ ಹೆಚ್ಚು ಜನರಲ್ಲಿ ಆವರಿಸುತ್ತಿದೆ ಎಂಬುದು ಮಾಹಿತಿ. ಈ ವಯೋಮಾನದವರು ಸಂಪೂರ್ಣ ಪರಾವಲಂಬಿಗಳಾಗಿಬಿಡುತ್ತಾರೆ. ದೇಹಕ್ಕೆ ವಯಸ್ಸಾಗುವುದು, ಖಾಯಿಲೆಗಳು ದಾಳಿಯಿಡುವುದು, ಅರಿವು ಕ್ಷೀಣಿಸಿ ಮರೆವು ಆವರಿಸುತವುದು ಎಲ್ಲವೂ ಜೈವಿಕ, ರಾಸಾಯನಿಕ ಹಾಗೂ ವಿಕಾಸದ ಸಹಜ ಪ್ರಕ್ರಿಯೆ. ದೇಹಕ್ಕೆ ಆವರಿಸುವ ಖಾಯಿಲೆಗಳು ವೈದ್ಯಕೀಯ ಆಯಾಮವಿರುವಂತಹ ವಿಷಯ. ಸಮಯಕ್ಕೆ ಸರಿಯಾಗಿ ಸೂಕ್ತವಾದ, ಫಲಕಾರಿಯಾದ ಚಿಕಿತ್ಸೆ, ಒಳ್ಳೆಯ ಶುಶ್ರೂಷೆಯಿದ್ದರೆ, ಇವುಗಳ ತೀವ್ರತೆ ಬಹಳಷ್ಟು ಕಡಿಮೆ ಮಾಡಿ ಸಹನೀಯ ಬದುಕು ನೀಡಬಹುದು. ಆದರೆ ಮಾನಸಿಕ ಒತ್ತಡದಲ್ಲಿ ಬರುವಂತಹ ಖಾಯಿಲೆಗಳಾದ ಖಿನ್ನತೆ, ಮರೆಗುಳಿತನ, ನಿದ್ರಾಹೀನತೆ ಇವುಗಳು ಒಡ್ಡುವ ಸಮಸ್ಯೆಯೇ ಬೇರೆ. (ವೃದ್ಧಾಪ್ಯದಲ್ಲಿ ಸಹಜವಾಗಿ ಬರುವ ಅರಳು ಮರಳು ಬೇರೆ. ಆದರೆ ವಿಲಕ್ಷಣ ಖಾಯಿಲೆ ರೂಪದಲ್ಲಿ ಬರುವ ಆಲ್ಝೈಮರ್, ಡಿಮೆನ್ಸಿಯಾದ ಮರೆಗುಳಿತನವೇ ಬೇರೆ) ಔಷಧಿ, ಚಿಕಿತ್ಸೆಗೆ ಅಷ್ಟೇನೂ ಸ್ಪಂದಿಸದಂತಹ ವ್ಯಾಧಿಗಳು ಇವು. ಈ ಸಮಸ್ಯೆಗಳು ವ್ಯಾಧಿ ಆವರಿಸಿದ ವ್ಯಕ್ತಿಯ ಆಚೆಗೂ ವಿಸ್ತರಿಸಿ ಕೌಟುಂಬಿಕ ಪರಿಸರವನ್ನು ಗಲಿಬಿಲಿ ಮಾಡುವಂತಹವು. ಈ ಹಂತದಲ್ಲಿ ಒಡನಾಟದಲ್ಲಿರುವ ವ್ಯಕ್ತಿಗಳ ತಾಳ್ಮೆ, ಪ್ರೀತಿ, ಸಹಿಷ್ಣುತೆ, ಹೊಂದಾಣಿಕೆಯಿದ್ದರೆ ಮನಸ್ಸಿಗೆ ಕೊಂಚ ನೆಮ್ಮದಿ ತರಬಹುದು. ಇವು ಕೌಟುಂಬಿಕ ಆಯಾಮ ಇರುವಂತಹುದು.

ಆದರೆ ಎಲ್ಲದಕ್ಕಿಂತ ಆತಂಕದ ವಿಷಯವೆಂದರೆ, ವೃದ್ಧಾಪ್ಯದ ಸಮಸ್ಯೆಯ ಸಾಮಾಜಿಕ ಆಯಾಮ.

ಭಾರತದಲ್ಲಿ ಹಿಂದೆಂದೂ ವಯಸ್ಸಾಗುವಿಕೆ ಸಮಸ್ಯೆಯಾಗಿರಲಿಲ್ಲ. ಎಲ್ಲರೂ ಒಪ್ಪಿಕೊಂಡು ಪಾಲಿಸುತ್ತಿದ್ದ ಅವಿಭಕ್ತ ಕುಟುಂಬ ಪದ್ಧತಿಯಲ್ಲಿ ವೃದ್ಧರಿಗೆ ಆರೈಕೆ, ಗೌರವ ಸಿಗುತ್ತಿತ್ತು. ಸಾಮಾಜಿಕ ರಚನೆಯೇ ವೃದ್ಧರ ಹಿತ ಕಾಯುತ್ತಿತ್ತು. ಆದರೆ ಈಗ ಅವಿಭಕ್ತ ಕುಟುಂಬ ಒಡೆದಿದೆ. ಸಾಮಾಜಿಕ ಬದ್ಧತೆಯಿಲ್ಲದೆ, ಜೀವನ ವ್ಯಕ್ತಿ ಕೇಂದ್ರೀತವಾಗಿದೆ. ಜಾಗತೀಕರಣ ಎಲ್ಲೆಲ್ಲೂ ಆವರಿಸಿದೆ. ಜೀವನಾಧಾರಿತ ಮೌಲ್ಯಗಳು ಕುಸಿದಿವೆ. ಬಾಲ್ಯದಿಂದಲೂ ನಮಗೆ ಹೇಳಿಕೊಟ್ಟ ಹಿರಿಯರನ್ನು ಗೌರವಿಸಬೇಕು. ತಾಯಿತಂದೆಯರನ್ನು ಪಾಲಿಸಬೇಕು ಎಂಬ ಮೌಲಿಕ ಪಾಠ ಮರೆತಿದ್ದೇವೆ. ಯಾಂತ್ರಿಕ ಜೀವನದಲ್ಲಿ ಎಲ್ಲರಿಗೂ ಒಂದಲ್ಲ ಒಂದು ಕಾರಣಕ್ಕೆ ವ್ಯವಧಾನವಿಲ್ಲ. ಈ ಸ್ಪರ್ಧಾತ್ಮಕ ಪರಿಸರದಲ್ಲಿ ಮಧ್ಯಮ ವರ್ಗದವರಿಗೆ ಕಷ್ಟಕಾರ್ಪಣ್ಯಗಳನ್ನು ನೀಗಿಸಿಕೊಳ್ಳುವ ತೊಯ್ದಾಟವಾದರೆ, ಸಿರಿವಂತರಿಗೆ ಇನ್ನೂ ಹಣ ಮಾಡುವ ಹುನ್ನಾರ; ಗಳಿಸಿದ ಹಣ ವ್ಯಯ ಮಾಡುವ ಬಿಡುವಿಲ್ಲದ ಹವ್ಯಾಸಗಳು. ಓದು ಕಲಿತ ಯುವಕರಿಗೆ ಯಶಸ್ಸು–ಸಂಪತ್ತು ಗಳಿಸಲು ವಿದೇಶಗಳಿಗೆ ಗುಳೇ ಹೋಗುವ ಪರಿಪಾಠ. ಎಲ್ಲರೂ ಎನ್‌ಆರ್‌ಐಗಳು. ಅಂದರೆ ನಾನ್ ರಿಟರ್ನ್ ಇಂಡಿಯನ್ಸ್. ಸಂಪತ್ತು ಸಿಗಬಹುದು, ಸಮಾಧಾನ, ಶಾಂತಿ ಎಲ್ಲಿದೆ? ಬದ್ಧತೆ ಎಲ್ಲಿದೆ? ಮಕ್ಕಳಿಗೆ ತಂದೆತಾಯಂದಿರು ಒಂದು ಸಂಪತ್ತಿನ ಮೂಲ ಅಷ್ಟೆ. ಅವರ ಆಸ್ತಿ, ಪಿಂಚಣಿ, ಸೇವೆ ಬೇಕೇ ವಿನಃ ಇವಿಲ್ಲದಿದ್ದರೆ ಅವರು ನಿರುಪಯುಕ್ತ ಎನ್ನುವ ವ್ಯಾಪಾರಿ ಮನೋಭಾವ.

ವೃದ್ಧ ತಂದೆತಾಯಿಯರ ಅಗತ್ಯಗಳ ಬಗ್ಗೆ ಯೋಚಿಸದೆ, ಭಾವನಾತ್ಮಕವಾಗಿ ಸ್ಪಂದಿಸದೇ, ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಆತ್ಮರತಿಯ ಭರದಲ್ಲಿರುವ ಮಕ್ಕಳ ಮಧ್ಯೆ ಹಿರಿಯ ಜೀವಿಗಳು ಅನಾಥರಾಗುತ್ತಿದ್ದಾರೆ. ಈ ಉಪೇಕ್ಷೆ, ಅಸಡ್ಡೆ ಒಂದು ಕ್ರೌರ್ಯ, ದೌರ್ಜನ್ಯವೇ ಸರಿ. ದೈಹಿಕ ದೌರ್ಜನ್ಯಕ್ಕಿಂತ ಈ ಮಾನಸಿಕ, ಭಾವನಾತ್ಮಕ ದೌರ್ಜನ್ಯ ತೀವ್ರವಾಗಿಯೂ, ಧೀರ್ಘಕಾಲಿಕವಾಗಿಯೂ ಪರಿಣಾಮ ಬೀರುತ್ತದೆ. ಒಂಟಿತನ, ಖಿನ್ನತೆ, ಆತ್ಮಸ್ಥೈರ್ಯ ಕುಂದು, ಸಾವಿನ ಚಿಂತೆ ಹಿರಿಯ ಜೀವಿಗಳಿಗೆ ಕಾಡುತ್ತದೆ. ನಮ್ಮನ್ನು ಹೆತ್ತವರು, ಜೀವನಪೂರ್ತಿ ಮಕ್ಕಳಿಗೆ ತಮ್ಮ ಸುಖ ಸಂತೋಷಗಳನ್ನು ಧಾರೆಯೆರೆದು ಕೈಹಿಡಿದು ನಡೆಸುತ್ತಾರೆ. ಅವರ ಕೈಕಾಲು ನಡುಗಲು ಶುರುವಾದಾಗ ನಾವು ಊರುಗೋಲಾಗಬೇಕು.

ಹಿರಿಯರ ಬಗ್ಗೆ ಪ್ರಪ್ರಥಮವಾಗಿ ಕಾಳಜಿವಹಿಸಿ ಸಾಂಸ್ಥಿಕ ರೂಪ ಪಡೆದ ಅಗ್ರಗಣ್ಯ ಸ್ವಯಂಸೇವಾ ಸಂಸ್ಥೆಯಾದ ಹೆಲ್ಪ ಏಜ್ ಇಂಡಿಯಾ ಭಾರತದ 70 ನಗರಗಳಲ್ಲಿ ನಡೆಸಿದ ಸರ್ವೇಕ್ಷಣ ಅಧ್ಯಯನದ ಪ್ರಕಾಱ ಭಾರತಾದ್ಯಂತ ಈ ದೌರ್ಜನ್ಯ ಕಾಣಬಹುದು. ಗಂಭೀರವಾದ ಸಂಗತಿಯೆಂದರೆ ನಮ್ಮ ಬೆಂಗಳೂರು ಮೊದಲ ಸ್ಥಾನದಲ್ಲಿರುವುದು.

ವಿಶ್ವಸಂಸ್ಥೆಯು ಕೂಡ ಈ ವಿದ್ಯಮಾನವನ್ನು ಅನೇಕ ಇತರ ಮುಂದುವರೆಯುತ್ತಿರುವ ದೇಶಗಳಲ್ಲಿ ಗಮನಿಸಿದೆ.

**ದಿ ನ್ಯೂಯಾರ್ಕ್ ಟೈಮ್ಸ್‌ನ ಒಂದು ವರದಿ:**

ಈಕ್ವೇಡಾರ್ ದೇಶದ ಲಾ ಸಿನೇಗಾ ಎಂಬ ಒಂದು ಹಳ್ಳಿ. ಇಡೀ ಹಳ್ಳಿ ವೃದ್ಧರಿಂದಲೇ ತುಂಬಿದೆ. ಚಿಕ್ಕಮಕ್ಕಳಾಗಲಿ, ಯುವಕರಾಗಲಿ ಒಂದು ನರ ಪಿಳ್ಳೆಯೂ ಇಲ್ಲ. ಮುಂದೆ ಇದೇ ರೀತಿ ಬೇರೆಲ್ಲೂ ಆಗಬಹುದಾದ ಒಂದು ಕೆಟ್ಟ ಶಕುನವೋ ಏನೋ.

ಇನ್ನು ಗ್ರಾಮಾಂತರ ಸ್ಥಿತಿಯಂತೂ ಇನ್ನೂ ಸಂಕೀರ್ಣ. ಹಳ್ಳಿ ಹಳ್ಳಿಯೇ ವೃದ್ಧಾಶ್ರಮವಾಗುತ್ತಿದೆ. ಗ್ರಾಮಾಂತರ ಭಾಗದಲ್ಲಿ ವಾಸವಾಗಿರುವ ವೃದ್ಧರಿಗೆ ಆರೋಗ್ಯ ಸೌಲಭ್ಯವೂ ಇಲ್ಲ, ಆರ್ಥಿಕ ಸೌಲಭ್ಯವೂ ಇಲ್ಲ. ಅನಾರೋಗ್ಯಕ್ಕೆ ತುತ್ತಾದರೂ ಅವರು ಮೂಲೆಯಲ್ಲಿ ಹಾಸಿಗೆ ಹಿಡಿದು ಮಲಗುವುದಷ್ಟೇ ಬದುಕು. ಅವರ ನೋವು ಅಸೀಮಿತ.

ವೃದ್ಧ ತಂದೆತಾಯಿಯವರನ್ನು ನೋಡಿಕೊಳ್ಳುವುದು ಮಕ್ಕಳ ಕರ್ತವ್ಯ. ಅದು ಕರ್ತವ್ಯ–ಬದ್ಧತೆಯೇ ವಿನಃ ನಮ್ಮ ಆಯ್ಕೆ ಆಗಕೂಡದು. ಹೆಚ್ಚೇನು ಯೋಚಿಸದೆ, ಈ ಕರ್ತವ್ಯವನ್ನು ಸಹಜವಾಗಿ ಕೆಲವರು ನಿರ್ವಹಿಸಿದರೆ, ಬಹುಪಾಲು ಜನರು ಒತ್ತಾಯಪೂರ್ವಕವಾಗಿ, ಮನಸ್ಸಿಲ್ಲದೆ, ಹೊರೆ ಎಂದು ಭಾವಿಸುವುದುಂಟು. ಇನ್ನು ಕೆಲವರು ತಾಯಿ ತಂದೆ ಯನ್ನು ನೋಡಿಕೊಳ್ಳಲು ಸಾರಾಸಗಟಾಗಿ ತಿರಸ್ಕರಿಸಿ ಬಿಡುತ್ತಾರೆ.

ಇದಕ್ಕೊಂದು ಹೃದಯಸ್ಪರ್ಶಿ ದೃಷ್ಟಾಂತವನ್ನು ಪ್ರಸಿದ್ಧ ಅಂಕಣಕಾರರಾದ ಎಸ್. ಷಡಕ್ಷರಿಯವರು ತಮ್ಮ 'ಕ್ಷಣ ಹೊತ್ತು ಅಣಿ ಮುತ್ತು' ಮಾಲಿಕೆಯಲ್ಲಿ ಶೀರ್ಷಿಕೆ 'ಮರೆವಿಗೂ ಅರಿವಿಗೂ ನಡುವೆ ಎರಡೇ ಹೆಜ್ಜೆ' ಎಂಬುದನ್ನು ಸೊಗಸಾಗಿ ವಿವರಿಸಿದ್ದಾರೆ.

**(ಮುಂದುವರೆಯುವುದು)**

**– ಶ್ರೀನಿವಾಸನ್ ಡಿ.ಕೆ., ಮೈಸೂರು**

WISH YOU ALL OF THEM AUGUST 2018 HAVE A VERY HAPPY BIRTHDAY. GOD BLESS YOU. ALL YOUR DREAMS TO BE FULLFILLED. HAVE A NICE DAY AND KEEP ALWAYS LAUGHING IN YOUR LIFE

| | | | |
|---|---|---|---|
| 1 Jalajakshi | Mysuru | 16 Kalambari | Vellor |
| 2 Radhika | Coimbatore | 17 Shilparani | Mysuru |
| 3 Priyanka | Mangalore | 18 Bharathi | Madurai |
| 4 Sindhu | Shivamogga | 19 Shambhavi | Agra |
| 5 Suhasini | Hyderabad | 20 Lathakumari | Channapatna |
| 6 Malathi | Bengaluru | 21 Dr Manjula | IAS Officer |
| 7 Preethi | Ernakulam | 22 Bindhu | Kanakapura |
| 8 Janaki | Bengaluru | 23 Nandini | Jaipur |
| 9 Lakshmi | Mandya | 24 Aswathi S | IAS Officer |
| 10 Deepa | Mandya | 25 Niranjana Raj | Dubai |
| 11 Mala | Salem | 26 Leelavathi | Nasik |
| 12 Ranjitha | Belgaum | 27 Sarala | Singapur |
| 13Kasthuri | Tumkur | 28 Shanthala | Vijayawada |
| 13 Prathibha | Bellary | 29 Deepika | Mysuru |
| 14 Umadevi | Nanjangud | 30 Shilpashree | Hospet |
| 15 Chandrakala | Tiptur | 31 Chaitra | Davanagere |

## ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**1. ಸುರೇಶ, ಬೆಂಗಳೂರು**

ಹೆಂಡತಿಗೆ ಪ್ರಿಯವಾಗುವ ಮಾತು ಯಾವುದು ಸಾರ್?

–ಆಯ್ತು ಬಿಡು– ನೀನು ಹೇಳಿದ ಹಾಗೆ ಆಗಲಿ.

**2. ರಮೇಶ, ಹಾಸನ**

ಗಂಡಸಿಗೆ ಹೊಟ್ಟೆ ಬಂದರೆ ಸುಖ ಪುರುಷ ಅಂತಾರೆ, ಹೆಣ್ಣಿಗೆ ಹೊಟ್ಟೆ ಬಂದರೆ?

–ಮದುವೆಗೆ ಮುಂಚೆ ಬಂದರೆ ಪರಪುರುಷ, ಆದ್ಮೇಲೆ ಬಂದ್ರೆ ಗಂಡನ ಪೌರುಷ ಅಂತಾರೆ!

**3. ರಾಮಣ್ಣ, ಮಂಡ್ಯ**

ಕನ್ನಡಿಗೂ, ಭೂತಕನ್ನಡಿಗೂ ವ್ಯತ್ಯಾಸವೇನು?

–ಕನ್ನಡಿ ಒಡವೆ ತೋರಿಸುತ್ತೆ, ಭೂತಕನ್ನಡಿ ಮೊಡವೆ ತೋರಿಸುತ್ತೆ.

**4. ಗುಂಡಣ್ಣ, ಬೆಂಗಳೂರು**

ಹೆಣ್ಣು ಮುನಿದರೆ ಮಾರಿ, ಗಂಡು?

– ವೆರಿ ಸಿಂಪಲ್, ಹುಡುಕುತ್ತಾನೆ ಬಾರಿಗೆ ದಾರಿ

**5. ಮಲ್ಲಣ್ಣ, ಮೈಸೂರು**

ಬಸವಣ್ಣನವರ ಕಲ್ಯಾಣಕ್ಕೂ, ಈಗಿನ ಕಲ್ಯಾಣ ಮಂಟಪಗಳಿಗೂ ಏನು ವ್ಯತ್ಯಾಸ?

–ಬಸವಣ್ಣನವರದು ಅನುಭವ ಮಂಟಪ, ಈಗಿನವರದ್ದು ಮಂಟಪದಲ್ಲಿ ಅನುಭವ

**6. ಕವಿತಾ, ತುಮಕೂರು**

ಕೋಳಿನೂ ಕೂಗುತ್ತೆ, ಕಾಗೆನೂ ಕೂಗುತ್ತೆ, ವ್ಯತ್ಯಾಸವೇನು?

– ಕೋಳಿ ಅಲರಾಂ!, ಕಾಗೆ ರಾಜಕಾರಣಿ ತರಹ ಆಯಾರಾಂ, ನಯಾರಾಂ!

**7. ನಿರ್ಮಲ, ಹೊಸಪೇಟೆ**

ಹಿತ್ತಲ ಗಿಡ ಮದ್ದಂತೆ, ಹೆತ್ತವರಿಗೆ ಹೆಗ್ಗಣವೇ ಮುದ್ದಂತೆ, ಇದ್ಯಾವುದೂ ಇಲ್ಲದವರಿಗೆ ಏನಂತೆ?

– ಪಕ್ಕದ ಮನೆಯ ಆಂಟಿಯೇ ಮುದ್ದಂತೆ

**8. ಸರೋಜ, ನಂಜನಗೂಡು**

ಸಾರ್ವಜನಿಕ ಸ್ಥಳದಲ್ಲಿ ಮದ್ಯಪಾನ ಮಾಡಬಾರದು. ಇದರ ನಿಜವಾದ ಅರ್ಥವೇನು?

– ಸಂಪನ್ನರಾಗಿ ಕಾಣಿರಿ, ಕದ್ದು ಹೆಂಡ ಕುಡಿಯಿರಿ, ಸರ್ಕಾರದ ಆದಾಯ ಹೆಚ್ಚಿಸಿರಿ

**9. ಸಂಧ್ಯಾ, ಬೆಂಗಳೂರು**

ರಾಜಕಾರಣಿಗಳು ಪ್ರತಿಭಟನೆಗಳನ್ನು ಗಾಂಧಿ ಪ್ರತಿಮೆಯಿಂದಲೇ ಆರಂಭಿಸುವುದೇಕೆ?

–ನಿನ್ನಿಂದ ನಮಗೆ ಈ ಅವಸ್ಥೆ ಎಂದು ಗಾಂಧಿಗೆ ಹೇಳಲು

**10. ಯೋಗೇಶ್, ಬಳ್ಳಾರಿ**

ವಿವಾಹಕ್ಕೆ ಮುಂಚೆ ಮಂಪರು ಪರೀಕ್ಷೆ ಕಡ್ಡಾಯ ಅಂತ ಮಾಡಿದರೆ?

– ಯೋಚನೆ ಮಾಡಬೇಡಿ. ಗ್ಯಾರಂಟಿ ಸಾವಿರಾರು ಮದುವೆಗಳು ಮುರಿದು ಬೀಳುತ್ತವೆ.

**11. ರಾಣಿ, ಮಡಿಕೇರಿ**

ಗಂಡಿನ ಕಣ್ಣಿಗೂ, ಹೆಣ್ಣಿನ ಕಣ್ಣಿಗೂ ಇರುವ ವ್ಯತ್ಯಾಸ?

– ಗಂಡಿನ ಕಣ್ಣು ಹೆಣ್ಣನ್ನು ನೋಡುತ್ತದೆ. ಹೆಣ್ಣಿನ ಕಣ್ಣು ... ಗಂಡಿನ ಕಣ್ಣು ಏನೆಲ್ಲಾ ನೋಡುತ್ತಿದೆ ಎಂಬುದನ್ನು ನೋಡುತ್ತದೆ.

# ಸ್ತ್ರೀ ಪುರುಷರಲ್ಲಿನ ಸ್ವಭಾವಜನ್ಯ ವ್ಯತ್ಯಾಸಗಳು

ಹೆಣ್ಣು ಗಂಡು ಸೇರಿ ಸೃಷ್ಟಿಸುತ್ತಾರೆ. ಅವರ ಶಾರೀರಿಕ ರಚನೆಯಲ್ಲಿ ವ್ಯತ್ಯಾಸವಿರುವಂತೆ ಪ್ರಕೃತಿಯೂ ಸ್ವಭಾವಜನ್ಯ ವ್ಯತ್ಯಾಸವನ್ನು ರೂಪಿಸಿದೆ. ಬನ್ನಿ ಅಂತರಗಳು ಯಾವುವು ಎಂಬುದನ್ನು ಗಮನಿಸೋಣ:

ಪ್ರಸಿದ್ಧ ಹಾಸ್ಯಲೇಖಕ ಮಾರ್ಕ್‌ಟ್ವೇನ್ ಸ್ತ್ರೀಪುರುಷರ ಒಂದು ವ್ಯತ್ಯಾಸವನ್ನು ವರ್ಣನೆ ಮಾಡುತ್ತಾ ಹೀಗೆ ಬರೆಯುತ್ತಾನೆ, "ಒಂದು ಬಾರಿ ಟಾಮ್ ಸಾಯರ್ (ಅವನ ಕಥೆಗಳ ನಾಯಕ) ಹುಡುಗಿಯರ ಬಟ್ಟೆಗಳನ್ನು ತೊಟ್ಟುಕೊಂಡು ಒಬ್ಬ ಹೆಂಗಸನ್ನು ಮೂರ್ಖಳನ್ನಾಗಿಸುವ ಪ್ರಯತ್ನದಲ್ಲಿದ್ದ. ಆ ಮಹಿಳೆಯೂ ಬಹಳ ಜಾಣೆಯಾಗಿದ್ದಳು. ಅವಳಿಗೆ ಅನುಮಾನ ಬಂದಿತು. ತನ್ನ ಅನುಮಾನ ಖಾತ್ರಿ ಮಾಡಿಕೊಳ್ಳಲು ಯಾವುದೋ ವಸ್ತುವನ್ನು ಟಾಮ್ ಮೇಲೆ ಎಸೆದಳು. ಆಗ ಅವನು ಪುರುಷ ಸಹಜ ಸ್ವಭಾವದಂತೆ ಎರಡೂ ಕಾಲುಗಳನ್ನು ಒಳಕ್ಕೆಳೆದುಕೊಂಡು ಅದನ್ನು ಹಿಡಿದುಕೊಂಡ. ಆದರೆ ಹೆಚ್ಚಿನ ಹೆಂಗಸರು ಮೊಳಕಾಲುಗಳನ್ನು ಮುಂದೆ ಮಾಡಿ ಹಿಡಿಯುತ್ತಾರೆ"? ಈ ರೀತಿ ಆ ಮಹಿಳೆ ಟಾಮ್‌ನ ನಿಜರೂಪವನ್ನು ಕಂಡು ಹಿಡಿದಳು.

- ಮಹಿಳೆಯರು ಬಹಳ ಬೇಗ ಅನುಮಾನ ಪಡುತ್ತಾರೆ ಮತ್ತು ನಿಜ ಏನೆಂದು ತಿಳಿಯಲು ಪೂರ್ತಿ ಪ್ರಯತ್ನ ಮಾಡುತ್ತಾರೆ.
- ಶ್ರವಣ ಸಾಮರ್ಥ್ಯದ ಪ್ರಶ್ನೆ ಬಂದಾಗ ಅದು ಮಹಿಳೆಯರಲ್ಲಿ ಚೆನ್ನಾಗಿ ಇರುತ್ತದೆ. ಅಲ್ಲವೇ ವಯಸ್ಸು ಆಗುತ್ತಿದ್ದ ಹಾಗೆ ಕಡಿಮೆಯೂ ಆಗುವುದಿಲ್ಲ. ಆದರೆ ಗಂಡಸರನ್ನು ಮಹಿಳೆಯರಿಗೆ ಹೋಲಿಸಿದರೆ ಶ್ರವಣಶಕ್ತಿ ಚಿಕ್ಕ ವಯಸ್ಸಿನಲ್ಲಿಯೇ ಕಡಿಮೆಯಾಗುತ್ತಾ ಹೋಗುತ್ತದೆ. ಮಹಿಳೆಯರಲ್ಲಿ ಶ್ರವಣಶಕ್ತಿ ಕಡಿಮೆಯಾಗತೊಡಗಿದರೆ ಅದು ತೀವ್ರ ಗತಿಯಲ್ಲಿ ಕಡಿಮೆಯಾಗುತ್ತಾ ಹೋಗುತ್ತದೆ.
- ಶಾರೀರಿಕ ರಚನೆಗೆ ಅನುಸಾರವಾಗಿ ಮಹಿಳೆಯರ ಮೆದುಳಿನ ತೂಕ ಸರಾಸರಿ 44 ಔನ್ಸ್ ಇದ್ದರೆ, ಪುರುಷರ ಮೆದುಳು 50 ಔನ್ಸ್ ಇರುತ್ತದೆ. ಈ ತೂಕಕ್ಕೂ ಬುದ್ಧಿವಂತಿಕೆಗೂ ಯಾವ ಸಂಬಂಧವೂ ಇಲ್ಲ. ಇದು ಕೇವಲ ದೇಹ ರಚನೆಯಲ್ಲಿನ ವ್ಯತ್ಯಾಸವಷ್ಟೇ.
- ಹೋಟೆಲ್ಲು, ರೆಸ್ಟೋರೆಂಟುಗಳಲ್ಲಿ ಮಹಿಳೆಯರು ನ್ಯಾಪ್‌ಕಿನ್‌ನಿಂದ ಬಾಯಿಯನ್ನು ಟಚ್ ಮಾಡುತ್ತಾರೆ. ಆದರೆ ಪುರುಷರು ತಮ್ಮ ತುಟಿಗಳನ್ನು ಸ್ವಚ್ಛಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ.
- ಸಾಮಾನ್ಯವಾಗಿ ಮಹಿಳೆಯರು, ರಸ್ತೆಯನ್ನು ಜೀಬ್ರಾ ಕ್ರಾಸಿಂಗ್‌ನಲ್ಲಿಯೇ ದಾಟುತ್ತಾರೆ. ಆದರೆ ಗಂಡಸರು ರಸ್ತೆಯ ಯಾವುದೇ ಭಾಗದಿಂದ ಲಾದರೂ ಸರಿ, ರಸ್ತೆ ದಾಟುವ ಪ್ರಯತ್ನ ಮಾಡುತ್ತಾರೆ.
- ಪ್ರಸಿದ್ಧ ಫ್ರೆಂಚ್ ಲೇಖಕ ಸೈಮನ್ ಡಿ. ಬೋವರ್ ಹೇಳುವಂತೆ ಯುವಕರು ತಮ್ಮ ಜೀವನ ಸಂಗಾತಿಯನ್ನು ಆರಿಸುವ ಮುಂಚೆ ಯುವತಿಯರ ಸೌಂದರ್ಯಕ್ಕೆ ಹೆಚ್ಚು ಮಹತ್ವ ಕೊಡುತ್ತಾರೆ. ಆದರೆ ಯುವತಿಯರು ಸೌಂದರ್ಯವಲ್ಲದೇ ಪುರುಷನ ಇತರ ಗುಣಗಳಿಗೂ ಪ್ರಾಮುಖ್ಯತೆ ಕೊಡುತ್ತಾರೆ.
- ಆಧುನಿಕ ಪದ್ಧತಿಯಂತೆ ಗಂಡು ಹೆಣ್ಣು ಯಾವುದಾದರೂ ಬಾರ್‌ಗೆ ಹೋದಾಗ ಹೆಣ್ಣು ಕೌಂಟರ್‌ನಿಂದ ಸ್ವಲ್ಪ ದೂರ ಕೂಡುತ್ತಾಳೆ. ಆದರೆ ಪುರುಷರು ಕೌಂಟರ್‌ಗೆ ಅಂಟಿಕೊಂಡು ಕುಳಿತು ತಮ್ಮ ಕೈ ಅಥವಾ ಮೊಣಕೈಯನ್ನು ಅದರ ಮೇಲೆ ಇಡುತ್ತಾರೆ.
- ಟೂತ್‌ಪೇಸ್ಟನ್ನು ಟ್ಯೂಬಿನಿಂದ ತೆಗೆಯುವಾಗ ಮಹಿಳೆಯರು ಮಧ್ಯಭಾಗದಲ್ಲಿ ಒತ್ತಿ ತೆಗೆಯುತ್ತಾರೆ. ಪುರುಷರು ಟ್ಯೂಬನ್ನು ಕೆಳಗಿನಿಂದ ಒತ್ತಿ ಪೇಸ್ಟ್ ತೆಗೆಯುತ್ತಾರೆ.
- ಒಬ್ಬ ಪ್ರಸಿದ್ಧ ಮನೋವಿಜ್ಞಾನಿಯ ಪ್ರಕಾರ ಮಹಿಳೆಯರು ಕೆಲಸವನ್ನು ನಿಧಾನವಾಗಿ ಮಾಡಲು ಇಷ್ಟಪಡುತ್ತಾರೆ. ಗಂಡಸರು ಮಧ್ಯ ಮಧ್ಯದಲ್ಲಿ ಇದ್ದಕ್ಕಿದಂತೆ ಕೆಲಸ ಮಾಡುವ ವೇಗವನ್ನು ಹೆಚ್ಚಿಸುತ್ತಾರೆ. ಅವರಿಗೆ ಕೆಲಸವನ್ನು ಒಂದೇ ವೇಗವಾಗಿ ಮಾಡಲು ಇಷ್ಟವಾಗುವುದಿಲ್ಲ.
- ನೌಕರಿ ಮಾಡುವ ಮಹಿಳೆಯರು ಕೆಲಸದ ಸಮಯದಲ್ಲಿ ಧರಿಸುವ ಏಪ್ರನ್‌ನ್ನು ಟೊಂಕಕ್ಕೆ ಕಟ್ಟಿ ಕೊಂಡಿರುತ್ತಾರೆ. ಗಂಡಸರು ಅದನ್ನು ಮುಂದೆ ಕಾಣುವಂತೆ ಕಟ್ಟಿಕೊಳ್ಳುತ್ತಾರೆ.
- ಬಹಳಷ್ಟು ಮಹಿಳೆಯರು ತಮ್ಮ ಗಂಭೀರ ವಿಚಾರಗಳನ್ನು ಮುಚ್ಚಿಡಲು ಪ್ರಯತ್ನ ಮಾಡುತ್ತಾರೆ. ಆದರೆ ಗಂಡಸರು ಅಂಥ ವಿಚಾರಗಳನ್ನು ಪ್ರಚಾರ ಮಾಡಲು ಪ್ರಯತ್ನಿಸುತ್ತಾರೆ.

**–ಎಂ.ಜಿ. ವತ್ಸಲಾ, ಬೆಂಗಳೂರು**

**(ಮುಂದುವರಿಯುವುದು)**

# ರೀ... ಸ್ವಲ್ಪ ನಗೀ ಪ್ಲೀಸ್

ಮೇಲಂತಸ್ತಿನ ಬ್ಯಾಂಕಿನಿಂದ ಲಿಫ್ಟ್‌ನಲ್ಲಿ ಇಳಿಯುವಾಗ ಗೀತಾಗೆ ಬಹಳ ಕೋಪ ಬಂದಿತ್ತು. ಏಕೆಂದರೆ ಲಿಫ್ಟ್‌ನಲ್ಲಿ ಬಹಳ ನೂಕುನುಗ್ಗಲಿತ್ತು. ಅವಳ ಪತಿ ಮೋಹನ್ ಒಬ್ಬ ಸ್ಲೀವ್‌ಲೆಸ್ ಬ್ಲೌಸ್‌ನ ಸುಂದರಿಗೆ ಅನಿವಾರ್ಯವಾಗಿ ಒರಗಿಕೊಂಡು ನಿಲ್ಲಬೇಕಾಗಿತ್ತು. ಅಗತ್ಯಕ್ಕಿಂತಲೂ ಹೆಚ್ಚಾಗಿಯೇ ಅವನು ಒರಗಿದ್ದಾನೆಂಬುದು ಅವಳ ಅಭಿಪ್ರಾಯವಾಗಿತ್ತು. ಉರಿಗಣ್ಣುಗಳಿಂದ ಗಂಡನನ್ನು ನೋಡಿದಳಾದರೂ 'ಏನೂ ಮಾಡಲಾಗದು' ಎಂಬಂತೆ ಅವನು ಸಂಜ್ಞೆ ಮಾಡಿದ.

ಅಂತೂ ಲಿಫ್ಟ್ ಗ್ರೌಂಡ್ ಫ್ಲೋರ್ ತಲುಪಿದ ಮೇಲೆ ಆ ಹುಡುಗಿ ಮೋಹನನಿಗೆ ಛಟೀರ್ ಎಂದು ಕೆನ್ನೆಗೆ ಬಾರಿಸಿ ಹೊಡೆಯುವುದೆ? "ಜಾಗವಿಲ್ಲ ಅಂತ ಒರಗಿದ್ದೇನೋ ಸರಿ, ಆದರೆ ಚಿವುಟಿದ್ದು ಯಾಕೆ?" ಅಂತ ಅವಳು ಗುಡುಗುತ್ತಾ ಹೋದಳು.

ಪಾಪ, ಮೋಹನ್ ಹಾಗೇನೂ ಮಾಡಿರಲಿಲ್ಲ. ಅಂತ ಅವನ ಮುಖವೇ ಹೇಳುತ್ತಿತ್ತು. "ನೋಡಿದ್ಯಾ ಡಿಯರ್, ನಾನೇನೂ ಮಾಡದೇನೇ ಅವಳು ಹೇಗೆ ಹೊಡೆದುಬಿಟ್ಟಳು ಅಂತ.."

ಗೀತಾ ನಗುತ್ತಾ ಹೇಳಿದಳು, "ನೀವಲ್ಲ.. ನಾನು ಅವಳನ್ನು ಚಿವುಟಿದ್ದು!" ಎನ್ನಬೇಕೆ?

* * *

ನಾಗೇಶ್: ನನಗೆ ತುಂಬ ಕೆಮ್ಮು ಆಗಿದೆ. ಕೆಮ್ಮಿ ಕೆಮ್ಮಿ ಎದೆಯೆಲ್ಲಾ ನೋಯುತ್ತಿದೆ. ಯಾರಾದರೂ ಒಳ್ಳೆಯ ಡಾಕ್ಟರ್ ಗೊತ್ತಿದ್ದಾರೇನು?

ಉಮೇಶ್: ನೆಗಡಿ, ಕೆಮ್ಮಿಗೆಲ್ಲಾ ಡಾಕ್ಟರ್‌ಗಳು ಯಾಕಯ್ಯ? ಕಳೆದ ತಿಂಗಳು ನನಗೂ ಹೀಗೇ ಆಗಿತ್ತು. ನಾನು ಮನೆಗೆ ಹೋಗಿ ನನ್ನ ಹೆಂಡತಿಗೆ ಹೇಳಿದಾಗ, ಅವಳು ನನ್ನ ಗಂಟಲು, ಎದೆ, ಬೆನ್ನಿಗೆಲ್ಲಾ ಚೆನ್ನಾಗಿ ಬಾಮ್ ತಿಕ್ಕಿ ಬಿಸಿ ಕಾಫಿ ಕೊಟ್ಟಳು. ಮಾರನೇ ದಿನ ಸರಿಹೋಗಿತ್ತು ಅಂತೀನಿ. ನೀನೂ ಯಾಕೆ ಹಾಗೆ ಮಾಡಬಾರದು?

ನಾಗೇಶ್: ನನಗೇನೂ ಅಭ್ಯಂತರವಿಲ್ಲ. ನಿನ್ನ ಹೆಂಡತಿ ತಪ್ಪು ತಿಳಿಯುವುದಿಲ್ಲ ತಾನೆ?

* * *

ಮರೆಗುಳಿ ಮಹೇಶ ತನ್ನ ಹೆಂಡತಿ ತಾರಾಳ ಮನ ಗೆಲ್ಲಲಿಕ್ಕಾಗಿ ಫ್ಲೋರಿಸ್ಟ್ ಏಜೆನ್ಸಿಗೆ ಫೋನ್ ಮಾಡಿ, ತನ್ನ ಹೆಂಡತಿಯ ಜನ್ಮದಿನ ಹಾಗೂ ತಮ್ಮ ಮದುವೆಯ ವಾರ್ಷಿಕೋತ್ಸವದಂದು ತಪ್ಪದೆ ಬೊಕ್ಕೆ ಕಳುಹಿಸಿಕೊಡಬೇಕೆಂದು ಆರ್ಡರ್ ಬುಕ್ ಮಾಡಿದ.

ತಾರಾ ಜನ್ಮದಿನ ಬಂದಿತು. ಜೊತೆಗೆ ಕೊರಿಯರ್‌ನಲ್ಲಿ ಅತ್ಯಾಕರ್ಷಕ ಬೊಕ್ಕೆ ಕೂಡ! 'ನಿನ್ನ ಪತಿಯ ಪ್ರೀತಿಯ ಕಿರುಕಾಣಿಕೆ' ಎಂಬ ಲೇಬಲ್ ನೋಡಿ ತಾರಾಗೆ 'ಗಗನವು ಎಲ್ಲೋ.. ಭೂಮಿಯು ಎಲ್ಲೋ..' ಎಂದು ಹಾಡುವಂತಾಯಿತು.

ಸಂಜೆ ಆಫೀಸಿನಿಂದ ಮರಳಿದ ಮಹೇಶ ಹೂದಾನಿಯಲ್ಲಿದ್ದ ಹೊಸ ಹೂವನ್ನು ಕಂಡು, 'ತಾರಾ ಏನಿವತ್ತು ವಿಶೇಷ? ಯಾವಾಗ ಇದನ್ನು ಕೊಂಡುಕೊಂಡೆ" ಎಂದು ಕೇಳುವುದೇ?

* * *

ತಮ್ಮ ಯಜಮಾನರಿಗೆ 102 ಡಿಗ್ರಿ ಜ್ವರ ಏರಿದಾಗ ನೀಲಮ್ಮನವರ ಕೈಕಾಲೇ ಆಡಲಿಲ್ಲ. ಆಕೆ ಗಾಬರಿಯಿಂದ ಡಾಕ್ಟರ್‌ಗೆ ಫೋನ್ ಮಾಡಿದರು. "ಡಾಕ್ಟ್ರೇ.. ಬೇಗ ಬನ್ನಿ! ನಮ್ಮ ಯಜಮಾನ್ರಿಗೆ 120 ಡಿಗ್ರಿ ಜ್ವರ ಏರಿದೆ"

"ಹಾಗಿದ್ದರೆ ನೀವು ಯಾರಾದರೂ ಫೈರ್ ಬ್ರಿಗೇಡ್‌ನವರಿಗೆ ಫೋನ್ ಮಾಡುವುದು ಒಳ್ಳೆಯದಮ್ಮ. ನಾನು ಅಲ್ಲಿಗೆ ಬಂದರೂ ಸಹಾಯ ಆಗಲಾರದು." ಡಾಕ್ಟರ್ ಸಮಾಧಾನಕರವಾಗಿ ಹೇಳಿದರು.

**–ರೂಪರಾಣಿ, ಬೆಳಗಾಂ**

## ಶುಭಾಶಯಗಳು

ಸತತ ಪ್ರಯತ್ನದಿಂದ 5ನೇ ತರಗತಿ ಮಾತ್ರ ವ್ಯಾಸಂಗ ಮಾಡಿರುವ ಕೊಪ್ಪಳದ ಗಂಗಮ್ಮ ಜೂನಿಯರ್ ಎಸ್. ಜಾನಕಿ ಎಂದು ಖ್ಯಾತಿ ಪಡೆದಿರುವ ಅಪ್ಪಟ ದೇಸೀ ಗಾನಕೋಗಿಲೆಯಾಗಿರುವುದಕ್ಕೆ ಮ.ವಿ. ಬಳಗ ಶ್ರೀಮತಿ ಗಂಗಮ್ಮನವರಿಗೆ ಶುಭವನ್ನು ಕೋರಿದೆ.

## ಮಹಿಳಾ ವಿಶೇಷ

ನಂ. 136, ಶ್ರೀ ನೀಲಕಂಠಸ್ವಾಮಿ ಮಠ,
ಗನ್‌ಹೌಸ್ ಎದುರು, ಖಿಲ್ಲೆ ಮೊಹಲ್ಲಾ,
ಮೈಸೂರು 570004, **ಮೊ: 9243584444**

RNI No. KARKAN/2015/71642 KA/SK/MYS/109/2017-2019

# ಬೆಳಗಲಿ ಭಾರತ

ಈ ಘೋಷಣೆಯಡಿಯಲ್ಲಿ ಸ್ವಯಂ ಉದ್ಯೋಗ, ಪಾರ್ಟ್ ಟೈಂ, ಫುಲ್ ಟೈಂ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿರುವ ಮಹಿಳೆಯರಿಗೆ/ಪುರುಷರಿಗಾಗಿ, ವಯಸ್ಸಿನ ಅಂತರವಾಗಲಿ, ವಿದ್ಯಾರ್ಹತೆಯಾಗಲಿ ಅವಶ್ಯಕತೆ ಇಲ್ಲ. ನಂಬಿಕೆ, ಛಲ ಹಾಗೂ ಸತತ ಪ್ರಯತ್ನಪಡುವವರು ಆರ್ಥಿಕವಾಗಿ ಮೇಲೆ ಬರಲು ಸುವರ್ಣಾವಕಾಶ. ನಿಮ್ಮ ಜೀವನ ಶೈಲಿ ಬದಲಾಗಲು ಸುವರ್ಣಾವಕಾಶ.



ಈ ಫೋಟೋದಲ್ಲಿರುವವರೆಲ್ಲರೂ ಸತತ ಪ್ರಯತ್ನದಿಂದ ಆರ್ಥಿಕವಾಗಿ ಮೇಲೆ ಬಂದಿರುವವರು. ಅವರುಗಳಂತೆ ಆರ್ಥಿಕವಾಗಿ ಮೇಲೆ ಬರಲು ಎಲ್ಲರಿಗೂ ಸಮಾನ ಅವಕಾಶವಿದೆ. ಹಾಗೂ ಅವಕಾಶವನ್ನು ಉಪಯೋಗಿಸಿಕೊಳ್ಳಲಿಚ್ಛಿಸುವವರೆಲ್ಲರಿಗೂ ಸ್ವಾಗತ ಸುಸ್ವಾಗತ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಿ.

We are very good lawyer for over own mistakes; But very good Judges for the mistakes of others

***

Stars can't shine without darkness

Mob: 9243584444
9632432495
9731503280
9741398108
7349547657

Book Post

To

From
Mahila Vishesha
No. 136, Sri Neelakantamutt
Opp. to Gunhouse, Kille Mohalla
Mysuru - 570004

Edited, Published and Owned by H.V.Venkatasubbarao, No.1021, 14th Cross, 2nd Stage, Hebbal, Mysore- 570017 and Printed by B.S.Meera and Printed at Annapuoorna Offset Printers, No.511, 14th Main, Saraswathipuram, Mysore-570009
Published at No.1021, 14th Cross, 2nd Stage, Hebbal, Mysore-570017. Email:mahilavishesha15@gmail.com Web:www.mahilavishesha.in Editor:H.V.Venkatasubbarao Mob: 8880334444 / 9243584444 RNI No:KARKAN/2015/71642